بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY **BADAR** QADIAN KANNADA

**ವರ್ಷ: 05**

**ಸಂಚಿಕೆ: 30**

**ವಾರ್ಷಿಕ ಶುಲ್ಕ ರೂ.600/-**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**25 ಜುಲೈ 2024, 25 ವಫಾ 1403 ಹಿಜರಿ ಶಮ್ಸಿ, 18 ಮುಹರ್ರಮ್ 1445 ಹಿಜರಿ ಖಮರಿ.**


## *ಅಹ್ಮದಿಯಾ ವಾರ್ತೆ*

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## *ಅಲ್ಲಾಹನ ಉಪದೇಶ*

مَنْ كَانَ يُرِيْدُ الْحَيٰوةَ الدُّنْيَا وَزِيْنَتَهَا نُوَفِّ اِلَيْهِمْ اَعْمَالَهُمْ فِيْهَا وَهُمْ فِيْهَا لَا يُبْخَسُوْنَ﴿۱۶﴾

**(ಸೂರಃ ಹೂದ್ : 16)**

**ಅಂದರೆ: ಐಹಿಕ ಜೀವನವನ್ನೂ ಅದರ ವೈಭವವನ್ನೂ ಯಾರು ಆಶಿಸುತ್ತಾರೋ ಅವರಿಗೆ ತಮ್ಮ ಕರ್ಮಗಳ ಫಲವನ್ನು ಪೂರ್ಣವಾಗಿ ನಾವು ಇಲ್ಲೇ ಕೊಟ್ಟುಬಿಡುತ್ತೇವೆ. ಅವರಿಗೆ ಅದರಲ್ಲಿ ಏನೂ ಕೊರತೆಯನ್ನುಂಟು ಮಾಡುವುದಿಲ್ಲ.**

## ಪ್ರವಾದಿ ಮುಹಮ್ಮದ್[(ಸ)] ರವರ ಉಪದೇಶ

**ಸಾಲದ ಸ್ವಲ್ಪ ಭಾಗ ಕ್ಷಮಿಸುವುದು**

**(2418)** ಹಝ್ರತ್ ಕಅ್‌ಬ್[(ರ)] ವರದಿ ಮಾಡುತ್ತಾರೆ. ಅವರು (ಹಝ್ರತ್ ಅಬ್ದುಲ್ಲ) ಬಿನ್ ಅಬಿ ಹದ್‌ರದ್(ರ) ರವರೊಂದಿಗೆ ಮಸೀದಿಯಲ್ಲಿ ತನ್ನ ಸಾಲ ಮರಳಿ ಕೇಳಿದರು. ಅದು ಅವರಿಗೆ ಸೇರಿದ್ದಾಗಿತ್ತು. ಅವರಿಬ್ಬರ ಧ್ವನಿ ಎಷ್ಟು ಜೋರಾಯಿತೆಂದರೆ ಆ ಧ್ವನಿ ರಸೂಲುಲ್ಲಾಹ್(ಸ) ರವರು ಸಹ ಆಲಿಸಿದರು. ಅದಾಗ್ಯೂ ಅವರು ತಮ್ಮ ಮನೆಯಲ್ಲಿದ್ದರು. ಆಗ ಅವರು ತಮ್ಮ ಕೋಣೆಯ ಪರದೆಯನ್ನು ಎತ್ತಿ ಅವರನ್ನು ಕರೆದರು. ಕಅಬ್(ರ) ಹೇಳಿದರು. ಯಾ ರಸೂಲಲ್ಲಾಹ್(ಸ) ಹಾಜರಿದ್ದೇನೆ. ಆಗ ಅವರು(ಸ) ನುಡಿದರು. ತಮ್ಮ ಈ ಸಾಲದಲ್ಲಿ ಇಷ್ಟನ್ನು ರಿಯಾಯಿತಿ ನೀಡಿ (ಅಂದರೆ ಅವರಿಗೆ ಅರ್ಧದಷ್ಟು ಎಂದು ಸಂಕೇತಿಸಿದರು). ಅದಕ್ಕೆ ಹಝ್ರತ್ ಕಅಬ್(ರ) ಹೇಳಿದರು. ಯಾ ರಸೂಲುಲ್ಲಾಹ್(ಸ) ರವರೇ ನಾನು ಒಪ್ಪುತ್ತೇನೆ. ಆಗ ಅವರು (ಅಬ್ದುಲ್ಲ(ರ) ಅವರಿಗೆ ಹೇಳಿದರು. ಹೋಗಿ ಅವರ ಸಾಲ ತೀರಿಸು.

**ಬಾಜಮಾತ್ ನಮಾಝಿನ ಪ್ರಾಮುಖ್ಯತೆ**

**(2420)** ಹಝ್ರತ್ ಅಬೂ ಹುರೈರ(ರ) ರವರು ವರದಿ ಮಾಡುತ್ತಾರೆ – ನಬಿ (ಸ) ನುಡಿದರು. ನಾನು ನಿಮಗೆ ನಮಾಝ್ ನಿರ್ವಹಿಸಲು ಆದೇಶಿಸಲು ನಿಶ್ಚಯ ಮಾಡಿದ್ದೆ. ಮತ್ತು ಅದನ್ನು ಪ್ರಾರಂಭಿಸಿದ ನಂತರ, ನಮಾಝ್‌ಗೆ ಬಾರದವರ ಮನೆಗೆ ಹೋಗಿ ಅವರು ಒಳಗಿದ್ದಾಗ ನಾನು ಹೊರಗಿನಿಂದ ಅವರ ಮನೆಗಳಿಗೆ ಬೆಂಕಿ ಹಚ್ಚಬೇಕು.

**(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಖುಸೂಮಾತ್, ಮುದ್ರಣ 2008 ಖಾದಿಯಾನ್)**

ನಮಾಝ್ ಮನುಷ್ಯನ ತಾಯಿತವಾಗಿದೆ, ಐದು ಬಾರಿ ಪ್ರಾರ್ಥಿಸಲು ಅವಕಾಶ ಲಭಿಸುತ್ತದೆ

ಯಾವುದಾದರು ಪ್ರಾರ್ಥನೆಯನ್ನು ಅಂಗೀಕರಿಸಲ್ಪಡುವುದು, ಆದ್ದರಿಂದ ನಮಾಝನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕು ಮತ್ತು ಇದು ನನಗೆ ತುಂಬಾ ಪ್ರಿಯವಾಗಿದೆ

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ದಯೆಯ (ರಹ್ಮಾನಿಯತ್) ದ್ಯೋತಕ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಆಗಿರುವರು. ಏಕೆಂದರೆ ಮುಹಮ್ಮದ್[(ಸ)]ನ ಅರ್ಥ ಹೆಚ್ಚು ಪ್ರಶಂಸಿಸಲ್ಪಟ್ಟವರು ಮತ್ತು ರಹ್ಮಾನ್ ನ ಅರ್ಥವು ಕೇಳದೆ, ಸತ್ಯವಿಶ್ವಾಸಿ ಮತ್ತು ಅವಿಶ್ವಾಸಿಯ ನಡುವೆ ಭೇದವಿಲ್ಲದೆ ನೀಡುವವನು ಎಂದಾಗಿದೆ ಮತ್ತು ಕೇಳದೆ ನೀಡುವವನು ಅವಶ್ಯವಾಗಿ ಪ್ರಶಂಸಿಸಲ್ಪಡುತ್ತಾನೆ ಎಂಬುದು ಸ್ಪಷ್ಟವಾದ ವಿಷಯವಾಗಿದೆ. ಆದ್ದರಿಂದ ಮುಹಮ್ಮದ್[(ಸ)]ನಲ್ಲಿ ದಯೆಯ (ರಹ್ಮಾನಿಯ್ಯತ್) ದ್ಯೋತಕವಿತ್ತು ಮತ್ತು ಅಹ್ಮದ್ ಎಂಬ ಹೆಸರಿನಲ್ಲಿ ಕರುಣಾಮಯವು (ರಹೀಮಿಯ್ಯತ್) ದ್ಯೋತಕವಾಗಿದೆ ಏಕೆಂದರೆ ರಹೀಮ್ ಎಂದರೆ ಶ್ರಮ ಮತ್ತು ಪ್ರಯತ್ನವನ್ನು ವ್ಯರ್ಥ ಮಾಡದವನು ಮತ್ತು ಅಹ್ಮದ್ ಎಂದರೆ ಪ್ರಶಂಸಿಸುವವನು ಮತ್ತು ಸಹಜವಾದ ವಿಷಯವೆಂದರೆ ಯಾರಾದರು ಯಾರಿಗಾದರೂ ಉತ್ತಮ ಕೆಲಸ ಮಾಡಿದರೆ ಅವನ ಬಗ್ಗೆ ಸಂತೋಷಪಡುತ್ತಾನೆ ಮತ್ತು ಅವನ ಕಠಿಣ ಪರಿಶ್ರಮಕ್ಕೆ ಪ್ರತಿಫಲ ನೀಡುತ್ತಾನೆ ಮತ್ತು ಅವನನ್ನು ಪ್ರಶಂಸಿಸುತ್ತಾನೆ. ಈ ಅರ್ಥದಲ್ಲಿ, ಅಹ್ಮದ್‌ನಲ್ಲಿ ಕರುಣೆಯ (ರಹೀಮಿಯ್ಯತ್) ನೋಟವಿದೆ. ಆದ್ದರಿಂದ ಅಲ್ಲಾಹನು ಮುಹಮ್ಮದ್ (ರಹ್ಮಾನ್) ಅಹ್ಮದ್ (ರಹೀಮ್) ಆಗಿರುವನು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಸರ್ವಶಕ್ತನಾದ ಅಲ್ಲಾಹನ ದಯೆ ಮತ್ತು ಕರುಣಾಮಯಿ ಎಂಬ ಎರಡು ಮಹಾನ್ ಗುಣಲಕ್ಷಣಗಳ ಅಭಿವ್ಯಕ್ತಿಯಾಗಿದ್ದರು."

* ಲೋಕವು ಒಂದು ರೈಲುಗಾಡಿಯಾಗಿದೆ ಮತ್ತು ನಮಗೆಲ್ಲರಿಗೂ ನಮ್ಮ ಜೀವನದ ಟಿಕೆಟ್ ನೀಡಲಾಗಿದೆ, ಎಲ್ಲೆಲ್ಲಿ ಯಾರ ನಿಲ್ದಾಣ ಬರುತ್ತದೆಯೊ ಆತನಿಗೆ ಅಲ್ಲಿ ಇಳಿಸಲಾಗುತ್ತದೆ ಅಂದರೆ ಅವನು ಮರಣ ಹೊಂದುತ್ತಾನೆ ಮತ್ತು ಮನುಷ್ಯನು ಜೀವನದ ಬಗ್ಗೆ ಕಾಲ್ಪನಿಕ ಪಲಾವ್ ಬೇಯಿಸುತ್ತಾನೆ ಮತ್ತು ಮಹಾನ್ ಆಸೆಗಳನ್ನು ಹೂಡುತ್ತಾನೆ.

* ನಮಾಝ್ ಮನುಷ್ಯನ ತಾಯಿತವಾಗಿದೆ. ಐದು ಬಾರಿ ಪ್ರಾರ್ಥನೆ ಮಾಡಲು ಅವಕಾಶ ಲಭಿಸುತ್ತದೆ. ಯಾವುದಾದರು ಪ್ರಾರ್ಥನೆಯನ್ನು ಅಂಗೀಕರಿಸಲ್ಪಡುತ್ತದೆ. ಆದ್ದರಿಂದ, ನಮಾಝನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕು ಮತ್ತು ಇದು ನನಗೆ ತುಂಬಾ ಪ್ರಿಯವಾಗಿದೆ.

* ನರಕದ ಏಳು ದ್ವಾರಗಳಿವೆ ಎಂದು ಸೂರಾ ಫಾತಿಹಾದ ಏಳು ವಚನಗಳನ್ನು ಈ ಕಾರಣಕ್ಕಾಗಿ ಇರಿಸಲಾಗಿದೆ. ಆದ್ದರಿಂದ ಪ್ರತಿಯೊಂದು ವಚನವೂ ರಕ್ಷಿಸುವ ಒಂದೊಂದು ಬಾಗಿಲಿನಂತಿದೆ.

**(ಮಲ್‌ಫೂಝಾತ್, ಸಂಪುಟ-2, ಪುಟ-20)**

**ಯಸ್‌ಅಲೂನಕ ಅನಿರ್‌ರೂಹ್**–ಅವರು ನಿನ್ನಿಂದ ಆತ್ಮದ ಬಗ್ಗೆ ಪ್ರಶ್ನಿಸುತ್ತಾರೆ.

ಈ ಆತ್ಮದ ಬಗ್ಗೆ ಕೇಳಲಾದ ಪ್ರಶ್ನೆಯ ಅರ್ಥವೇನಿದೆ? ಕೆಲವರು ಇದರ ತಾತ್ಪರ್ಯ ಜಿಬ್ರಾಯಿಲ್ (ಪವಿತ್ರಾತ್ಮ) ಎನ್ನುತ್ತಾರೆ. ಕೆಲವರು ಅದರ ಅರ್ಥ–ಪವಿತ್ರ ಖುರ್‌ಆನ್" ಎನ್ನುತ್ತಾರೆ. ಕೆಲವರು ದೇವದೂತ ಎನ್ನುತ್ತಾರೆ, ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್[(ರ)] "ಆತ್ಮ" ಅರ್ಥ "ದಿವ್ಯವಾಣಿ" ಎನ್ನುತ್ತಿದ್ದರು. ಈ ಅರ್ಥವು ಮೇಲಿನ ಎಲ್ಲಾ ಅರ್ಥಗಳಿಂದ ಉತ್ತಮವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ವಿವರವಾದ ರೀತಿಯಲ್ಲಿ ಈ ವಚನದ ಕುರಿತು ಚರ್ಚಿಸಿದ್ದಾರೆ. ಮತ್ತು ಇದರ ಅರ್ಥ ಮನುಷ್ಯನ ಆತ್ಮ ಎಂದೇ ಪರಿಗಣಿಸುತ್ತಾರೆ.

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಬನೀ ಈಸ್ರಯಿಲ್‌ನ ವಚನ 86 ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಆತ್ಮದ ಬಗ್ಗೆ ಕೇಳಲಾದ ಈ ಪ್ರಶ್ನೆಯ ಅರ್ಥವೇನು? ವಿವಿಧ ವ್ಯಾಖ್ಯಾನಗಾರರು ಇದರ ಹಲವು ಅರ್ಥಗಳನ್ನು

*(ಪುಟ ಸಂಖ್ಯೆ 08 ರಲ್ಲಿ ಮುಂದುವರಿಸಲಾಗಿದೆ)*

'ಬದರ್' ವಾರಪತ್ರಿಕೆಯನ್ನು **Online** ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: **https://akhbarbadr.in/Kannada/#gsc.tab=0**

# ಖುತ್‌ಬ ಜುಮುಅ

"ಈ ಯುದ್ಧದ ಕಾರಣವನ್ನು ವಿವರಿಸುತ್ತಾ, ಹದೀಸ್‌ನ ನಿರೂಪಕರು ಹಾಗೂ ಜೀವನಚರಿತ್ರೆಯ ಲೇಖಕರು ವಿಭಿನ್ನ ಕಾರಣಗಳನ್ನು ನೀಡುತ್ತಾರೆ ಮತ್ತು ಈ ಭಿನ್ನಭಿಪ್ರಾಯದಿಂದಾಗಿ, ಈ ಯುದ್ಧದ ಸಮಯದ ಬಗ್ಗೆಯು ಭಿನ್ನಭೀಪ್ರಾಯ ಉಂಟಾಗಿದೆ." (ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್)

ಹಝ್‌ರತ್ ಪೈಗಂಬರ್(ಸ) ಅವರಿಗೆ ಸರ್ವಶಕ್ತನಾದ ಅಲ್ಲಾಹನು ಯಹೂದಿಗಳ ಅಪಾಯಕಾರಿ ಪಿತೂರಿಯ ಬಗ್ಗೆ ದೈವವಾಣಿಯ ಮೂಲಕ ತಿಳಿಸಿದನು ಆದ್ದರಿಂದ ಅವರು ಅಲ್ಲಿಂದ ತಕ್ಷಣ ಎದ್ದು ಬಂದರು.

ಹಝ್‌ರತ್ ಪೈಗಂಬರ್(ಸ) ರು ಮದೀನಕ್ಕೆ ತಲುಪಿದ ನಂತರ ಹಝ್‌ರತ್ ಮುಹಮ್ಮದ್ ಬಿನ್ ಮುಸ್ಲಿಮಾ(ರ) ಅವರನ್ನು ಕರೆಸಿದರು. ಅವರು ಬಂದಾಗ, ಹಝ್‌ರತ್ ಪೈಗಂಬರ್(ಸ) ಅವರಿಗೆ ಹೀಗೆ ಆದೇಶಿಸಿದರು: ನೀವು ಬನೂ ನಝೀರ್ ಗೋತ್ರದ ಯಹೂದಿಗಳ ಬಳಿಗೆ ಹೋಗಿ ನನಗೆ ಹಝ್‌ರತ್ ಪೈಗಂಬರ್(ಸ)ರು ನೀವು ಅವರ ಈ ನಗರವನ್ನು ತೋರೆಯಬೇಕು ಎಂದು ನಿಮಗೆ ಸಂದೇಶವನ್ನು ಕಳುಹಿಸಿದ್ದಾರೆ.

## ಬನೂ ನಝೀ಼ರ್ ಕಡೆಯಿಂದ ಹಝ್‌ರತ್ ಪೈಗಂಬರ್(ಸ) ಅವರನ್ನು ವಧಿಸಲು ವಿಫಲ ಪ್ರಯತ್ನ ಹಾಗೂ ಬನೂನಝೀರ್ ಯುದ್ಧದ ಕಾರಣಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ

**ಸಲ್ಲಾಮ್ ಬಿನ್ ಮಿಸ್ಕಮ್, ಹುಯ್ ಬಿನ್ ಅಖ್ತಬ್**ಗೆ ಹೇಳಿದರು: ಅಲ್ಲಾಹನಾಣೆ! ಮುಹಮ್ಮದ್ ಅಲ್ಲಾಹನ ಸತ್ಯವಂತ ಸಂದೇಶವಾಹಕರೆಂದು ನಮಗೆ ಸಹ ಗೊತ್ತಿದೆ. ಅವರ ಗುಣಗಳ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ನಾವು ಅವರನ್ನು ಅನುಸರಿಸದೇ ಇರಲು ಕಾರಣ ನಾವು ಅವರ ಬಗ್ಗೆ ಅಸೂಯೆ ಹೊಂದಿದ್ದೇವೆ ಎಂಬುದಾಗಿದೆ. ಏಕೆಂದರೆ ಪ್ರವಾದಿತ್ವ ಬನೂ ಹಾರೂನ್‌ರಿಂದ ಬಿಟ್ಟು ಹೋಗಿದೆ. ಬನ್ನಿರಿ ನಾವು ಅವರು ದಯಪಾಲಿಸಿದ ಸಂರಕ್ಷಣೆಯನ್ನು ಸ್ವೀಕರಿಸೋಣ.

**ಸಲ್ಲಾಮ್ ಬಿನ್ ಮಿಶಕಮ್** ಹೇಳಿದರು: ಅಬ್ದುಲ್ಲಾ ಬಿನ್ ಉಬೈನ ಹೇಳಿಕೆಗೆ ಯಾವುದೇ ಸ್ಥಾನಮಾನವಿಲ್ಲ. ನೀವು ಮುಹಮ್ಮದ್(ಸ)ರ ವಿರುದ್ಧ ಹೋರಾಡುವವರೆಗೂ ಅವನು ನಿಮ್ಮನ್ನು ಸಾವಿನ ಕೂಪಕ್ಕೆ ಎಸೆಯಲು ಬಯಸುತ್ತಾನೆ. ಅವನು ತನ್ನ ಮನೆಯಲ್ಲಿಯೇ ಕುಳಿತಿರುವವನು ಮತ್ತು ನಿಮ್ಮನ್ನು ಬಿಟ್ಟು ಬಿಡುವನು.

ಹುಯ್ ತನ್ನ ಸಹೋದರ ಜುದೈ ಬಿನ್ ಅಖ್ತಬ್ ನನ್ನು ಸಂದೇಶವಾಹಕನಾಗಿ ಕಳುಹಿಸಿ, ನಾವು ಇಲ್ಲಿಂದ ಹೋಗುವುದಿಲ್ಲ ಮತ್ತು ನಿಮ್ಮ ಕೈಲಾದಷ್ಟು ಮಾಡಿ ಎಂದು ಮುಸ್ಲಿಮರ ನಾಯಕನಿಗೆ ತಿಳಿಸಿದನು.

ಹಝ್‌ರತ್ ಪೈಗಂಬರ್(ಸ)ರು ಹೇಳಿದರು: **ಹಾರಬತಿಲ್ ಯಹೂದು**. ಅಂದರೆ ಯಹೂದಿಗಳು ಯುದ್ಧ ಘೋಷಿಸಿದ್ದಾರೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **21-06-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಯಹೂದಿಗಳ ಗೋತ್ರವಾದ ಬನೂ ನಝೀರ್‌ನವರು ಹಝ್‌ರತ್ ಪೈಗಂಬರ್(ಸ) ಅವರನ್ನು ವಧಿಸಲು ಸಂಚು ಹೂಡಿದ್ದರು ಎಂದು ಉಲ್ಲೇಖಿಸಲಾಗಿದೆ. ಹಿಂದಿನ ಖುತ್‌ಬ ಜುಮುಅದಲ್ಲಿ ನಾನು ಹಝ್‌ರತ್ ಪೈಗಂಬರ್(ಸ)ರನ್ನು ವಧಿಸಲು ಅವರು ಮಾಡಿದ ಯೋಜನೆಯನ್ನು ಸರ್ವಶಕ್ತನಾದ ಅಲ್ಲಾಹನು ಹೇಗೆ ವಿಫಲಗೊಳಿಸಿದನು ಎಂಬುದನ್ನು ನಾನು ವಿವರಾತ್ಮಕವಾಗಿ ವಿವರಿಸಿದ್ದೇನೆ.

ಹಝ್‌ರತ್ ಪೈಗಂಬರ್(ಸ) ಅವರು ಈ ಪಿತೂರಿಯ ಬಗ್ಗೆ ಇಲ್‌ಹಾಮ್ (ದೇವವಾಣಿ) ಮೂಲಕ ತಿಳಿದುಕೊಂಡರು ಮತ್ತು ಅದರ ವಿವರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ: ಅಮ್ರ್ ಇಬ್ನ್ ಜಹಾಶ್ ಬಂಡೆಗಲ್ಲನ್ನು ಎಸೆಯಲು ಛಾವಣಿಯ ಮೇಲೆ ಬಂದಾಗ ಹಝ್‌ರತ್ ಪೈಗಂಬರ್(ಸ) ರನ್ನು ಇಲ್‌ಹಾಮ್ ಮೂಲಕ ಯಹೂದಿಗಳ ಪಿತೂರಿಯ ಬಗ್ಗೆ ತಿಳಿದುಕೊಂಡರು. ಹಝ್‌ರತ್ ಪೈಗಂಬರ್(ಸ)ರು ತಮ್ಮ ಸ್ಥಳದಿಂದ ಬೇಗನೆ ಎದ್ದು, ತಮಗೆ(ಸ) ಏನಾದರೂ ಕೆಲಸವಿದೆ ಎಂಬಂತೆ ತನ್ನ ಸಹಾಬೀಯರನ್ನು ಅಲ್ಲೇ ಕುಳಿತು ಬಿಟ್ಟರು. ಮತ್ತು ಅವರು ಬೇಗನೆ ಮದೀನಾಗೆ ಮರಳಿದರು. ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಯಾವುದೋ ಅವಶ್ಯಕತೆಗೆ ಹೋಗಿದ್ದಾರೆ ಎಂದು ರಸೂಲುಲ್ಲಾಹ್(ಸ)ರ ಸಹಾಬೀಯರು ಭಾವಿಸಿದ್ದರು, ಆದರೆ ತಡವಾದಾಗ ಸಹಾಬಿಗಳು ರಸೂಲುಲ್ಲಾಹ್(ಸ)ರ ಬಗ್ಗೆ ಚಿಂತಿತರಾದರು ಮತ್ತು ಅವರು ಅವರನ್ನು ಹುಡುಕಲು ಎದ್ದರು. ದಾರಿಯಲ್ಲಿ ಅವರು ಮದೀನಾದಿಂದ ಬಂದ ವ್ಯಕ್ತಿಯನ್ನು ಭೇಟಿಯಾದರು. ಸಹಾಬಿಗಳು ಅವರನ್ನು ಹಝ್‌ರತ್ ಪೈಗಂಬರ್(ಸ)ರ ಬಗ್ಗೆ ಕೇಳಿದಾಗ ಅವರು ಹೇಳಿದರು: ಹಝ್‌ರತ್ ಪೈಗಂಬರ್(ಸ)ರು ಮದೀನಾವನ್ನು ಪ್ರವೇಶಿಸುವುದನ್ನು ನಾನು ನೋಡಿದೆ. ಸಹಾಬೀಯರು ತಕ್ಷಣವೇ ಮದೀನಾಗೆ ತಲುಪಿದರು. ಆಗ ಹಝ್‌ರತ್ ಪೈಗಂಬರ್(ಸ)ರು ಬನೂ ನಝೀರ್ ಅವರು ಯೋಜಿಸಿದ್ದ ಪಿತೂರಿಯ ಬಗ್ಗೆ ಸಹಾಬಿಗಳಿಗೆ ತಿಳಿಸಿದರು. (ಸೀರತ್ ಹಲಾಬಿಯಾಹ್, ಸಂಪುಟ-2, ಪುಟ-357, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್, ಲೆಬನಾನ್, 2008)

ಮತ್ತೊಂದೆಡೆ, ಯಹೂದಿಯರು ಪರಸ್ಪರ ತಮ್ಮಲ್ಲಿ ಇನ್ನೂ ಸಮಾಲೋಚಿಸುತ್ತಿದ್ದರು ಅಷ್ಟರಲ್ಲಿ ಓರ್ವ ಯಹೂದಿ ಮದೀನದಿಂದ ಅಲ್ಲಿಗೆ ಬಂದನು. ಆತನು ತನ್ನ ಸಂಗಡಿಗರನ್ನು ಪರಸ್ಪರ ಹಝ್‌ರತ್ ಪೈಗಂಬರ್(ಸ) ಅವರ ಬಗ್ಗೆ ಸಮಾಲೋಚನೆ ಮಾಡುವುದನ್ನು ಕೇಳಿದಾಗ, ಆತನು ಕೇಳಿದನು ನೀವು ಏನು ಮಾಡಬೇಕೆಂದು ಬಯಸುತ್ತಿದ್ದೀರ? ಅದಕ್ಕೆ ಅವರೆಲ್ಲರು ಹೇಳಿದರುನಾವು ಹಝ್‌ರತ್ ಪೈಗಂಬರ್(ಸ) ಅವರನ್ನು ವಧಿಸಿ ಮತ್ತು ಅವರ(ರ) ಸಹಾಬೀಯರನ್ನು ಬಂಧಿಸಬೇಕೆಂದು ಬಯಸುತ್ತೇವೆ. ಅದಕ್ಕೆ ಆತನು ಕೇಳಿದನು ಮುಹಮ್ಮದ್(ಸ) ಎಲ್ಲಿದ್ದಾರೆ? ಅದಕ್ಕೆ ಅವರು ಹೇಳಿದರು: ಅವರು ಮುಹಮ್ಮದ್(ಸ) ಅವರು ಹತ್ತಿರದ ಮತ್ತೊಂದು ಸ್ಥಳದಲ್ಲಿ ಕುಳಿತಿದ್ದಾರೆ. ಅದನ್ನು ಕೇಳಿ ಆತನು ಹೇಳಿದನು: ನಾನು ಹಝ್‌ರತ್ ಪೈಗಂಬರ್(ಸ)ರನ್ನು ಮದೀನಾಗೆ ಪ್ರವೇಶಿಸುವುದನ್ನು ನೋಡಿರುವೆನು. ಇದನ್ನು ಆಲಿಸಿ ಅವರೆಲ್ಲರು ಆಶ್ಚರ್ಯಚಕಿತರಾದರು.
(ಸಬ್ಲುಲ್ ಹುದಾ ವಾಲ್-ರಶಾದ್, ಸಂಪುಟ-4, ಪುಟ-318, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್, ಲೆಬನಾನ್, 1993)

ಮತ್ತೊಬ್ಬ ಜೀವನಚರಿತ್ರೆಕಾರರು ಅದರ ಬಗ್ಗೆ ಬರೆದಿದ್ದಾರೆ, ಹಝ್‌ರತ್ ಪೈಗಂಬರ್(ಸ) ಹಿಂದಿರುಗಲು ಸ್ವಲ್ಪ ಸಮಯ

ತೆಗೆದುಕೊಂಡಾಗ, ಹಝ್ರತ್ ಅಬೂಬಕರ್ ಸಿದ್ದೀಕ್(ರ) ಹೇಳಿದರು: ನಾವು ಇಲ್ಲಿ ಉಳಿದುಕೊಳ್ಳುವುದರಿಂದ ಯಾವುದೇ ಪ್ರಯೋಜನವಿಲ್ಲ, ವಾಸ್ತವವಾಗಿ, ಹಝ್ರತ್ ಪೈಗಂಬರ್(ಸ)ರಿಗೆ ಯಾವುದಾದರು ಆಜ್ಞೆ ಬಂದಿರಬಹುದು. ಆದ್ದರಿಂದ ಅವರೆಲ್ಲರೂ ಅಲ್ಲಿಂದ ನಡೆಯಲು ಪ್ರಾರಂಭಿಸಿದಾಗ ಯಹೂದಿಗಳ ನಾಯಕ ಹುಯ್ಯಿ ಬಿನ್ ಅಖ್ತಬ್ ಹೀಗೆ ಹೇಳಿದನು: ಅಬುಲ್ ಖಾಸಿಮ್ ಅವಸರ ಮಾಡಿದ್ದಾರೆ. ನಾವು ಆಹಾರವನ್ನು ತಯಾರಿಸುತ್ತಿದ್ದೆವು ಮತ್ತು ಪರಿಹಾರಧನಕ್ಕಾಗಿ ಸಮಾಲೋಚನೆ ನೀಡುತ್ತಿದ್ದೆವು. ಅವರಿಗೆ ಆಹಾರ ನೀಡುವ ಮೂಲಕ ನಿಮ್ಮ ಅಗತ್ಯತೆಗಳನ್ನು ಪೂರೈಸಲು ಬಯಸುತ್ತಿದ್ದೆವು. ತದನಂತರ ಸಹಾಬಿಗಳು ಮದೀನಾಗೆ ಹಿಂದಿರುಗುತ್ತಿದ್ದಾಗ ಒಬ್ಬ ವ್ಯಕ್ತಿಯನ್ನು ಭೇಟಿಯಾದರು. ಅವರು ಅವನನ್ನು ಕೇಳಿದರು, "ನೀವು ಹಝ್ರತ್ ಪೈಗಂಬರ್(ಸ)ರನ್ನು ನೋಡಿದ್ದೀರಾ? ಅದಕ್ಕೆ ಅವನು ಹೇಳಿದನು ನಾನು ಅವರನ್ನು ಈಗಷ್ಟೇ ಭೇಟಿಯಾಗಿದ್ದೇನೆ. ಅವರು ಮದೀನಾವನ್ನು ಪ್ರವೇಶಿಸುತ್ತಿದ್ದರು. ಸಹಾಬಾಗಳು ಅಲ್ಲಿಗೆ ತಲುಪಿದಾಗ, ಹಝ್ರತ್ ಪೈಗಂಬರ್(ಸ) ರು ಅಲ್ಲಿ ಉಪಸ್ಥಿತರಿದ್ದರು. ಹಝ್ರತ್ ಅಬು ಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್(ಸ)!! ನೀವು ಅಲ್ಲಿಂದ ಮರಳಿದ್ದೀರಿ ನಮಗೆ ತಿಳಿಯಲಿಲ್ಲ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು:

**ಹಮ್ಮತಿಲ್ ಯಹೂದು ಬಿಲ್ ಗದ್ರಿಬೀ** ಅಂದರೆ: ಯಹೂದಿಗಳು ನನ್ನನ್ನು ಮೋಸಗೊಳಿಸಲು ಉದ್ದೇಶಿಸಿದ್ದರು.

ಹಝ್ರತ್ ಪೈಗಂಬರ್(ಸ)ರು ದೈವವಾಣಿಯ ಪ್ರಕಾರ ಬೇಗನೆ ಬಂದರು. ಹಝ್ರತ್ ಪೈಗಂಬರ್(ಸ)ರು ತಮ್ಮ ಸಹಾಬಗಳು ಅಪಾಯದಲ್ಲಿಲ್ಲದ ಕಾರಣ ಅವರಿಗೆ ಏನೂ ಹೇಳಲಿಲ್ಲ. ಯಹೂದಿಗಳ ಮುಖ್ಯ ಗುರಿ ನೀವು(ಸ) ಮಾತ್ರ ಆಗಿದ್ದರು. ಆದ್ದರಿಂದ, ನನ್ನ ಸಹಾಬಗಳು ಸುರಕ್ಷಿತವಾಗಿರುವುದು ಮಾತ್ರವಲ್ಲದೆ, ಅವರು ನನ್ನನ್ನು ಹುಡುಕಿಕೊಂಡು ಬೇಗನೆ ಹೊರಬರುತ್ತಾರೆ ಎಂದು ಅವರು ತೃಪ್ತರಾಗಿದ್ದರು.
(ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–07, ಪುಟ 40–41, ಮಕ್ತಬಾ ದಾರುಸ್ಸಲಾಮ್ ರಿಯಾದ್ 1435 ಹಿಜರಿ)

ಆ ಸಮಯದಲ್ಲಿ ಈ ವಚನವೂ ಅವತೀರ್ಣವಾಯಿತು ಎಂದು ಹೇಳಲಾಗುತ್ತದೆ: **ಯಾ ಅಯ್ಯುಹಲ್ಲಝೀನ ಆಮನುಝ್ಕುರೂ ನಿಅ್ಮತಲ್ಲಾಹಿ ಅಲೈಕುಮ್ ಇಝ್ ಹಮ್ಮ ಖೌಮುನ್ ಅಯ್ಯಬ್ಸುತೂ ಇಲೈಕುಮ್ ಅಯ್‌ದೀಹಿಮ್ ಫಕಫ್ಫ ಅಯ್‌ದೀಹಿಮ್ ಅನ್ಕುಮ್. ವತ್ತಖುಲ್ಲಾಹ, ವಲಲ್ಲಾಹಿ ಫಲ್‌ಯತವಕ್ಕಲಿಲ್‌ಮುಮಿನೀನ್–** (ಅಲ್‌ಮಾಇದಃ: 12) (ಸಬ್ಲುಲ್ ಹುದಾ ವಲ್–ರಶಾದ್, ಸಂಪುಟ–4, ಪುಟ–319, ದಾರುಲ್ ಕುತುಬ್ ಇಲ್ಮಿಯಾ ಬೈರುತ್, ಲೆಬನಾನ್, 1993)

ಎಲೈ ಸತ್ಯವಿಶ್ವಾಸಿಗಳೇ, ಒಂದು ಕೋಮಿನವರು ನಿಮ್ಮ ಮೇಲೆ ಕೈಯೆತ್ತಲು ಉದ್ದೇಶಿಸಿದಾಗ ನಿಮ್ಮ ಮೇಲೆ ಉಂಟಾದ ಅಲ್ಲಾಹನ ಅನುಗ್ರಹವನ್ನು ಸ್ಮರಿಸಿರಿ. ಅವನು ಅವರ ಕೈಗಳನ್ನು ನಿಮ್ಮಿಂದ ತಡೆದನು.ನೀವು ಅಲ್ಲಾಹನ ಭಯಭಕ್ತಿಯುಳ್ಳವರಾಗಿರಿ.ಸತ್ಯವಿಶ್ವಾಸಿಗಳು (ತಮ್ಮ ಎಲ್ಲ ಕಾರ್ಯಗಳಲ್ಲೂ) ಅಲ್ಲಾಹನಲ್ಲಿ ಭರವಸೆ ಇಡಬೇಕಾಗಿದೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದರ ಕುರಿತು ಹೀಗೆ ಬರೆದಿದ್ದಾರೆ: **"ಅವರು"** ಅಂದರೆ ಯಹೂದಿಗಳು **"**ಹಝ್ರತ್ ಪೈಗಂಬರ್(ಸ) ಅವರ ಆಗಮನದಿಂದ ತೋರಿಕೆಗಾಗಿ ಸಂತಸ ವ್ಯಕ್ತಪಡಿಸಿ ಸ್ವಾಗತಿಸಿ ಹೇಳಿದರು, ನೀವು ಕುಳಿತುಕೊಳ್ಳಿ ನಾವು ಈಗ ನಮ್ಮ ಪಾಲಿನ ಹಣವನ್ನು ನಿಮಗೆ ನೀಡುತ್ತೇವೆ. ಹಾಗಾಗಿ ಹಝ್ರತ್ ಪೈಗಂಬರ್(ಸ)ರು ತಮ್ಮ ಕೆಲವು ಸಹಾಬಗಳೊಂದಿಗೆ ಗೋಡೆಯ ನೆರಳಿನಲ್ಲಿ ಕುಳಿತರು ಮತ್ತು ಬನೂನಝೀರ್ ಗೋತ್ರದವರು ಪರಸ್ಪರ ಸಮಾಲೋಚನೆಗಾಗಿ ಒಂದೆಡೆ ಹೋದರು ಮತ್ತು ಅವರು ರೂಪಾಯಿಗಳ ಪೂರೈಕೆಯನ್ನು ಏರ್ಪಡಿಸುತ್ತಿದ್ದೇವೆ ಎಂದು ಬಹಿರಂಗಪಡಿಸಿದರು ಆದರೆ ಅವರು ಹಣವನ್ನು ಜೋಡಿಸುವ ಬದಲು ಇದು ತುಂಬಾ ಒಳ್ಳೆಯ ಅವಕಾಶ ಎಂದು ಸಲಹೆ ನೀಡಿದರು. ಮುಹಮ್ಮದ್(ಸ.ಅ)ರವರು ಮನೆಯ ನೆರಳಿನಲ್ಲಿ ಗೋಡೆಗೆ ಆತುಕೊಂಡಿದ್ದಾರೆ. ಅತ್ತ ಕಡೆಯಿಂದ ಯಾರಾದರೂ ಮನೆಯನ್ನು ಹತ್ತಬೇಕು ಮತ್ತು ನಂತರ ಅವರ ಮೇಲೆ ಒಂದು ದೊಡ್ಡ ಕಲ್ಲನ್ನು ಎಸೆದು ತನ್ನ ಕೆಲಸ ಮುಗಿಸಬೇಕು. **"**ನೌಝುಬಿಲ್ಲಾಹ್**"**. ಯಹೂದಿಗಳಲ್ಲಿ ಒಬ್ಬ ವ್ಯಕ್ತಿ ಸಲ್ಲಾಮ್ ಬಿನ್ ಮಿಶ್ಕಮ್ ಎಂಬವನು ಈ ಪ್ರಸ್ತಾಪವನ್ನು ವಿರೋಧಿಸುತ್ತಾ ಹೇಳಿದನು: ಇದು ದ್ರೋಹದ ಕೃತ್ಯವಾಗಿದೆ ಮತ್ತು ನಾವು ಮುಹಮ್ಮದ್ (ಸ) ರೊಂದಿಗೆ ಮಾಡಿಕೊಂಡ ಒಪ್ಪಂದದ ವಿರುದ್ಧವಾಗಿದೆ. ಆದರೆ ಈ ಜನರು ಒಪ್ಪಲಿಲ್ಲ ಮತ್ತು ಅಂತಿಮವಾಗಿ ಅಮ್ರೋ ಬಿನ್ ಜಹಾಶ್ ಎಂಬ ಯಹೂದಿಯು ತುಂಬಾ ಭಾರವಾದ ಕಲ್ಲಿನೊಂದಿಗೆ ಮನೆಯ ಮೇಲೆ ಹತ್ತಿದನು ಮತ್ತು ಮೇಲಿನಿಂದ ಈ ಕಲ್ಲನ್ನು ಉರುಳಿಸಲು ಹತ್ತಿರವಾಗಿದ್ದನು. ಆದರೆ ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ) ಅವರಿಗೆ ಯಹೂದಿಗಳ ಈ ದುಷ್ಕೃತ್ಯದ ಬಗ್ಗೆ ಅಲ್ಲಾಹನಿಂದ ಇಲ್‌ಹಾಮ್ ಮೂಲಕ ತಿಳಿಸಲಾಯಿತು ಎಂದು ವರದಿಯಾಗಿದೆ, ಮತ್ತು ಅವರು ಬೇಗನೆ ಅಲ್ಲಿಂದ ಎದ್ದು ಬಂದರು ಮತ್ತು ಅವರಿಗೆ ಬಹುಶಃ ಏನಾದರು ಬಹಳ ಅಗತ್ಯವಾದ ಕೆಲಸಕ್ಕೆ ಹೋಗಿರಬಹುದು ಎಂದು ಸಹಾಬಗಳು ಮತ್ತು ಯಹೂದಿಗಳು ಯೋಚಿಸಿದರು. ಹೀಗೆ ಸಂತೃಪ್ತಿಯಿಂದ ಅವರಿಗಾಗಿ ಕಾದು ಕುಳಿತರೂ ಆದರೆ ಹಝ್ರತ್ ಪೈಗಂಬರ್(ಸ)ರು ಅಲ್ಲಿಂದ ಎದ್ದು ನೇರವಾಗಿ ಮದೀನಾದೆ ಬಂದರು. ಸಹಾಬಗಳು ಅವರಿಗಾಗಿ ಸ್ವಲ್ಪ ಸಮಯ ಕಾದರು, ಆದರೆ ಅವರು ಹಿಂತಿರುಗದಿದ್ದಾಗ, ಅವರು ಗಾಬರಿಯಿಂದ ತಮ್ಮ ಸ್ಥಳಗಳಿಂದ ಎದ್ದು, ಅಲ್ಲಿ ಇಲ್ಲಿ ಅವರನ್ನು ಹುಡುಕಿದರು ಮತ್ತು ಅಂತಿಮವಾಗಿ ಮದೀನಾಗೆ ತಲುಪಿದರು. ತದನಂತರ, ಹಝ್ರತ್ ಪೈಗಂಬರ್(ಸ) ಯಹೂದಿಗಳ ಈ ಅಪಾಯಕಾರಿ ಪಿತೂರಿಯ ಬಗ್ಗೆ ಸಹಾಬಗಳಿಗೆ ತಿಳಿಸಿದರು. (ಸೀರತ್ ಖಾತಮನ್ನಬಿಯೀನ್, ಹಝ್ರತ್ ಸಾಹಿಝ್ಬಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–523)

ಹಝ್ರತ್ ಪೈಗಂಬರ್(ಸ)ರ ನಿರ್ಗಮನದ ನಂತರ ಯಹೂದಿಗಳ ನಡವಳಿಕೆಯ ವಿವರಣೆಯಲ್ಲಿ ಬರೆಯುತ್ತಾರೆ: ಯಹೂದಿಗಳು ಅವರು ಮಾಡಿದ ಕೃತ್ಯಕ್ಕೆ ಬಹಳ ನಾಚಿಕೆಪಡುತ್ತಿದ್ದರು. ಓರ್ವ ಯಹೂದಿ ಕಿನಾನಾ ಬಿನ್ ಸುವ್ವೈರಾ ಅಥವಾ ಸೂರಿಯ ಹೇಳಿದನು: ಮುಹಮ್ಮದ್(ಸ) ಏಕೆ ಎದ್ದು ಇಲ್ಲಿಂದ ಹೊರಟುಹೋದರು ಎಂದು ನಿಮಗೆ ತಿಳಿದಿದೆಯೇ? ಅದಕ್ಕೆ ಅವರು ಹೇಳಿದರು ಅಲ್ಲಾಹನ ಆಣೆ!! ನಮಗೆ ಗೊತ್ತಿಲ್ಲ, ನಿಮಗೆ ಏನಾದರೂ ಗೊತ್ತಿದ್ದರೆ ನಮಗೆ ತಿಳಿಸಿ. ಅವನು ಹೇಳಿದನು: ತೌರಾತ್‌ನ ಆಣೆ!! ಖಂಡಿತವಾಗಿಯು ನನಗೆ ತಿಳಿದಿದೆ ನೀವು ಅವರನ್ನು ಮೋಸಗೊಳಿಸಲು ಉದ್ದೇಶಿಸಿದ್ದನ್ನು ಮುಹಮ್ಮದ್(ಸ) ಅವರಿಗೆ ತಿಳಿಸಲಾಗಿದೆ. ಆದ್ದರಿಂದ ಇನ್ನು ಮುಂದೆ ನೀವು ಸ್ವತಃ ನಿಮ್ಮನ್ನು ಮೋಸಗೊಳಿಸಬೇಡಿ. ಅಲ್ಲಾಹನ ಆಣೆ! ನಿಸ್ಸಂದೇಹವಾಗಿ, ಅವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ, ಮತ್ತು ನೀವು ಅವರನ್ನು ಮೋಸಮಾಡುತ್ತಿದ್ದೀರಿ ಎಂದು ಅವರಿಗೆ ದೇವವಾಣಿಯ ಮೂಲಕ ತಿಳಿಸಿದ್ದರಿಂದ ಅವರು ಇಲ್ಲಿಂದ ಎದ್ದು ಹೋಗಿರುವುದು. ಖಂಡಿತವಾಗಿಯೂ ಅವರು ಕೊನೆಯ ಪ್ರವಾದಿಯಾಗಿದ್ದಾರೆ. ಕೊನೆಯ ಪ್ರವಾದಿ ಹಾರೂನ್ ಅಲೈಹಿಸ್ಸಲಾಮ್ ಅವರ ಪೀಳಿಗೆಯಿಂದ ಬರಬೇಕೆಂದು ನೀವು ಬಯಸಿದ್ದೀರಿ, ಆದರೆ ಅಲ್ಲಾಹನು ಅವರನ್ನು ಎಲ್ಲಿಂದ ಬೇಕಾದರೂ ಕಳುಹಿಸಿರುವೆನು. ನಿಸ್ಸಂದೇಹವಾಗಿಯು, ನಾವು ತೌರಾತ್‌ನಲ್ಲಿ ಪಠಿಸುವ ನಮ್ಮ ಗ್ರಂಥಗಳು ಬದಲಾಗಿಲ್ಲ. ಆ ಗ್ರಂಥಗಳಲ್ಲಿ ಹೀಗೆ ಬರೆಯಲಾಗಿದೆ: ಆ ಪ್ರವಾದಿಯು ಮಕ್ಕಾದಲ್ಲಿ ಜನಿಸುತ್ತಾನೆ ಮತ್ತು ಅವನು ಉಸ್ರಿಬ್, ಅಂದರೆ ಮದೀನಾಗೆ ವಲಸೆ ಹೋಗುತ್ತಾನೆ. ನಮ್ಮ ಗ್ರಂಥ ತೌರಾತ್‌ನಲ್ಲಿ ವಿವರಿಸಲಾದ ಅವರ ಗುಣಲಕ್ಷಣಗಳು ಅವರಿಗೆ ಮಾತ್ರ ಹೊಂದುತ್ತವೆ. ನೀವು ರಕ್ತಪಾತವನ್ನು ಹೊರತುಪಡಿಸಿ ಏನನ್ನೂ ಪಡೆಯುವುದಿಲ್ಲ ಎಂದು ನಾನು ನೋಡುತ್ತೇನೆ. ನೀವು ನಿಮ್ಮ ಸಂಪತ್ತು, ಆಸ್ತಿಗಳು ಮತ್ತು ಮಕ್ಕಳನ್ನು ಅಳುತ್ತಾ ತ್ಯಜಿಸುತ್ತೀರಿ. ನೀವು ನನ್ನ ಮಾತನ್ನು ಒಪ್ಪಿಕೊಂಡರೆ ನಿಮ್ಮ ಗೌರವ ಮತ್ತು ಘನತೆ ಉಳಿಯುತ್ತದೆ ನನ್ನ ಎರಡು ಮಾತನ್ನು ಒಪ್ಪಿಕೊಳ್ಳಿ, ಇಲ್ಲದಿದ್ದರೆ ಮೂರನೆಯ ಮಾತಿನಲ್ಲಿ ಒಳ್ಳೆಯದಿಲ್ಲ. ಆ ಎರಡು ವಿಷಯಗಳು ಯಾವುವು ಎಂದು ಅವರು ಕೇಳಿದರು? ಮೊದಲನೆಯದು ನೀವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರೆ ಮತ್ತು ಮುಹಮ್ಮದ್(ಸ) ಅವರ ಸಂಗಡಿಗರಾದರೆ, ನಿಮ್ಮ ಸಂಪತ್ತು ಮತ್ತು ನಿಮ್ಮ ಮಕ್ಕಳು ಸುರಕ್ಷಿತವಾಗಿರುತ್ತಾರೆ ಮತ್ತು ನೀವು ಅವರ ಉನ್ನತ ಶ್ರೇಣಿಯ ಸಹವರ್ತಿಗಳಾಗುತ್ತೀರಿ ಮತ್ತು ನಿಮ್ಮ ಮನೆಗಳಿಂದ ಹೊರಹಾಕಲಾಗುವುದಿಲ್ಲ. ಯಹೂದಿಯರು ಕಿನಾನ ಬಿನ್ ಸೂರಿಯ್ಯಾನ ಮಾತನ್ನು ಆಲಿಸಿ ಹೀಗೆ ಉತ್ತರಿಸಿದರು: ನಾವು ತೌರಾತ್ ಮತ್ತು ಮೋಶೆಯ ಒಡಂಬಡಿಕೆಯನ್ನು ಬಿಡುವುದಿಲ್ಲ. ಅದಕ್ಕೆ ಕಿನಾನಾ ಹೇಳಿದನು, ಎರಡನೆಯ ವಿಷಯವೆಂದರೆ ನೀವು ಕಾಯಿರಿ. ಶೀಘ್ರದಲ್ಲೇ ಅವರು ನನ್ನ ನಗರವನ್ನು ತೊರೆಯಲು ನಿಮಗೆ ಆದೇಶಿಸುತ್ತಾರೆ. ಅದಕ್ಕೆ ನೀವು ಹೌದು ಎಂದು ಹೇಳುತ್ತೀರಿ. ಆಗ ಅವರು ನಿಮ್ಮ ರಕ್ತ ಮತ್ತು ನಿಮ್ಮ ಸಂಪತ್ತನ್ನು ತನಗೆ ಕಾನೂನುಬದ್ಧಗೊಳಿಸುವುದಿಲ್ಲ ಮತ್ತು ನಿಮ್ಮ ಸಂಪತ್ತು ಮತ್ತು ಆಸ್ತಿಯನ್ನು ನಿಮಗಾಗಿ ಬಿಟ್ಟುಬಿಡುತ್ತಾರೆ. ನೀವು ಬಯಸಿದರೆ ಅದನ್ನು ಮಾರಾಟ ಮಾಡಿ ಮತ್ತು ನೀವು ಬಯಸಿದರೆ ಅದನ್ನು ಇರಿಸಿಕೊಳ್ಳಿ. ಅದಕ್ಕೆ ಅವರು ಹೇಳಿದರು: ಹೌದು ನಾವು ಅದಕ್ಕೆ ಸಿದ್ಧರಿದ್ದೇವೆ. ಸಲ್ಲಾಮ್ ಇಬ್ನ್ ಮಿಶ್ಕಾಮ್ ಹೇಳಿದನು, ನೀವು ಏನು ಹೇಳಿದರೂ, ನಾನು ನಿಮ್ಮೊಂದಿಗೆ ಅದರಲ್ಲಿ ಭಾಗವಹಿಸಲು ಒತ್ತಾಯಿಸಲ್ಪಟ್ಟಿದ್ದೇನೆ. ಅವರು, ಅಂದರೆ ಮುಹಮ್ಮದ್(ಸ) ಅವರು ಈಗ ನಮಗೆ ಈ ಪ್ರದೇಶವನ್ನು ತೊರೆಯಿರಿ ಎಂಬ ಸಂದೇಶವನ್ನು ಕಳುಹಿಸಲು ಹೊರಟಿದ್ದಾರೆ. ಓ ಹುಯ್! ಈ ವಿಷಯದ ಬಗ್ಗೆ ಹಿಂದೆ

ಮುಂದೆ ಸರಿಯಬೇಡ. ಆ ಮುಖ್ಯಸ್ಥನಿಗೆ ಹೇಳಿದನು. ಮತ್ತು ಸ್ವಇಚ್ಛೆಯಿಂದ ದೇಶ ಬಹಿಷ್ಕಾರವನ್ನು ಸ್ವೀಕರಿಸಿ ಅವರ ನಗರವನ್ನು ತೊರೆಯಿರಿ. ಅದಕ್ಕೆ ಹುಯ್ಯ ಹೇಳಿದನು: ನಾನೂ ಹಾಗೆಯೇ ಮಾಡಿ ಅಲ್ಲಿಂದ ಹೊರಡುತ್ತೇನೆ.

(ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-319, ದಾರುಲ್ ಕುತುಬ್ ಇಲ್ಮಿಯಾ, ಬೈರುತ್, ಲೆಬನಾನ್, 1993) (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-7, ಪುಟಗಳು 42-43, ಮಕ್ತಬಾ ದಾರುಸ್ಸಲಾಮ್ ರಿಯಾದ್ 1435 ಹಿಜರಿ)

ಮದೀನಾಗೆ ತಲುಪಿದ ನಂತರ ಹಝ್ರತ್ ಪೈಗಂಬರ್(ಸ)ರು ಈ ಪಿತೂರಿಗಳ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡರು?

ಇದರ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಯಹೂದಿಗಳನ್ನು ಗಡಿಪಾರು ಮಾಡಲು ಆದೇಶಿಸಿದರು, ಆದರೆ ಅವರು ನಿರ್ಧಾರವನ್ನು ಪಾಲಿಸಲು ನಿರಾಕರಿಸಿದರು. ಆರಂಭದಲ್ಲಿ ಬರೆದದ್ದು ಹೀಗೆಯೇ ಆದರೆ ನಂತರ ಮನಸ್ಸು ಬದಲಾಯಿತು ಮತ್ತು ಹೋರಾಡಲು ನಿರ್ಧರಿಸಿದರು. ಅದರ ಇನ್ನಷ್ಟು ವಿವರಗಳು ಹೀಗಿವೆ: ಹಝ್ರತ್ ಪೈಗಂಬರ್(ಸ) ರು ಮದೀನಕ್ಕೆ ತಲುಪಿದ ನಂತರ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮಾ(ರ) ಅವರನ್ನು ಕರೆಸಿದರು. ಅವರು ಬಂದಾಗ, ಹಝ್ರತ್ ಪೈಗಂಬರ್(ಸ) ಅವರಿಗೆ ಹೀಗೆ ಆದೇಶಿಸಿದರು: ನೀವು ಬನೂ ನಝೀರ್ ಗೋತ್ರದ ಯಹೂದಿಗಳ ಬಳಿಗೆ ಹೋಗಿ ನನಗೆ ಹಝ್ರತ್ ಪೈಗಂಬರ್(ಸ)ರು ನೀವು ಅವರ ಈ ನಗರವನ್ನು ತೋರೆಯಬೇಕು ಎಂದು ನಿಮಗೆ ಸಂದೇಶವನ್ನು ಕಳುಹಿಸಿದ್ದಾರೆ. (ಸೀರ'ತ್ ಎನ್‌ಸೈಕ್ಲೋಪೀಡಿಯಾ, ಸಂಪುಟ-7, ಪುಟ 42-43, ಮಕ್ತಬ ದಾರುಸ್ಸಲಾಮ್ ರಿಯಾದ್, 1435 ಹಿಜರಿ)

ಮುಹಮ್ಮದ್ ಬಿನ್ ಮಸ್ಲಮಾ(ರ) ಅವರು ಬನೂ ನಝೀರ್‌ರ ಬಳಿಗೆ ಬಂದು ಹೇಳಿದರು, ಮುಹಮ್ಮದ್(ಸ) ನಿಮಗೆ ಸಂದೇಶವನ್ನು ಕಳುಹಿಸಿದ್ದಾರೆ, ಆದರೆ ಅದನ್ನು ನಿಮಗೆ ತಿಳಿಸುವ ಮೊದಲು, ನಾನು ನಿಮಗೆ ಒಂದು ವಿಷಯವನ್ನು ನೆನಪಿಸುತ್ತೇನೆ. ಅದು ನಿಮಗೆ ತಿಳಿದಿದೆ. ಅದು ಏನು ಎಂದು ಅವರು ಕೇಳಿದರು ಅದಕ್ಕೆ ಮುಹಮ್ಮದ್ ಬಿನ್ ಮುಸ್ಲಿಮಹ್(ರ) ಹೇಳಿದರು, ಅಲ್ಲಾಹನು ಮೂಸಾ(ಅ) ಅವರ ಮೇಲೆ ಅವತರಿಸಿದ ತೌರಾತ್ ಮೂಲಕ ನಾನು ನಿಮ್ಮನ್ನು ಕೇಳುತ್ತೇನೆ. ಇಸ್ಲಾಮಿನ ಮೊದಲು ಒಂದು ದಿನ ನಾನು ತೌರಾತ್ ಅನ್ನು ತಂದು ನಿಮಗೆ ಪ್ರಸ್ತುತಪಡಿಸಿದ್ದು ನಿಮಗೆ ನೆನಪಿರಬಹುದು. ಅದಕ್ಕೆ ನೀವು ಹೇಳಿದ್ದೀರಿ ನೀವು ತಿನ್ನಲು ಬಯಸಿದರೆ, ನಿಮಗೆ ತಿನಿಸಲಾಗುವುದು. ನೀವು ಯಹೂದಿಯಾಗಲು ಬಯಸಿದರೆ ನಿಮ್ಮನ್ನು ಯಹೂದಿಯನ್ನಾಗಿ ಮಾಡುತ್ತೇವೆ. ಅದಕ್ಕೆ ನಾನು ಹೇಳಿದೆ ನೀನು ತಿನ್ನಿಸಿದರೆ ನಾನು ತಿನ್ನುತ್ತೇನೆ ಆದರೆ ನೀವು ಯಹೂದಿ ಮಾಡಲು ಬಯಸಿದರೆ ಅದು ಅಸಾಧ್ಯ. ನಂತರ ನೀವು ಒಂದು ತಟ್ಟೆಯಲ್ಲಿ ಆಹಾರವನ್ನು ಬಡಿಸಿದಿರಿ ಮತ್ತು ನೀವು ಯಹೂದಿ ಧರ್ಮವನ್ನು ಏಕೆ ಸ್ವೀಕರಿಸಲು ಬಯಸುವುದಿಲ್ಲ? ಎಂದು ಕೇಳಿದ್ದೀರಿ. ನೀವು ಇಬ್ರಾಹೀಮಿನ ಧರ್ಮದ ಅನ್ವೇಷಕರಲ್ಲವೇ? ಅಬು ಆಮಿರ್ ಇಬ್ರಾಹೀಮಿನ ಧರ್ಮದ ಅನುಯಾಯಿ ಅಲ್ಲವೇ? ಈ ಧರ್ಮದ ಪ್ರವಾದಿಯೊಬ್ಬರು ನಮ್ಮ ಬಳಿಗೆ ಬರಲಿದ್ದಾರೆ ಅವರ ಚಿಹ್ನೆಗಳು ಇವೆ. ಅವನು ನಗುಮುಖಿಯಾಗಿರುವನು. ಅವನು ಸತ್ಯದ ಶತ್ರುಗಳನ್ನು ನಾಶಮಾಡುವನು. ಅವನ ಕಣ್ಣುಗಳು ಕೆಂಪಾಗಿರುತ್ತವೆ. ಅವನು ಯೆಮನ್‌ನಿಂದ ಬರುತ್ತಾನೆ. ಅವನು ಒಂಟೆಯ ಮೇಲೆ ಸವಾರಿ ಮಾಡುವನು. ತಲೆಯ ಮೇಲೆ ಪೇಟವನ್ನು ಧರಿಸುವನು. ಒಣ ರೊಟ್ಟಿಯ ತುಂಡಿನ ಮೇಲೆ ಅವನು ತೃಪ್ತನಾಗುವನು. ಅವನ ಕುತ್ತಿಗೆಯಿಂದ ಕತ್ತಿ ನೇತಾಡುತ್ತದೆ ಮತ್ತು ಅವನು ಬುದ್ಧಿವಂತಿಕೆಯ ಮಾತುಗಳನ್ನು ಹೇಳುವನು. ಅದಕ್ಕೆ ಯಹೂದಿಗಳು ಹೇಳಿದರು: ನೀವು ಎಲ್ಲಾ ಚಿಹ್ನೆಗಳನ್ನು ಸರಿಯಾಗಿ ಹೇಳಿದ್ದೀರಿ. ನಾವು ನಿಮ್ಮೊಂದಿಗೆ ಈ ವಿಷಯಗಳನ್ನು ಹೇಳಿದ್ದೇವೆ, ಆದರೆ ಈ ಚಿಹ್ನೆಗಳು ಆ ವ್ಯಕ್ತಿಯಲ್ಲಿ ಅಂದರೆ ಮುಹಮ್ಮದ್(ಸ) ರಲ್ಲಿ ಇಲ್ಲ. ಅದಕ್ಕೆ ಮುಹಮ್ಮದ್ ಬಿನ್ ಮುಸ್ಲಿಮಹ್(ರ) ಹೇಳಿದರು: ನಾನು ನಿಮಗೆ ನೆನಪಿಸಲು ಬಯಸಿದ ವಿಷಯವೂ ಇದೇ ಆಗಿತ್ತು. ಈಗ ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಆಲಿಸಿ. ಹಝ್ರತ್ ಪೈಗಂಬರ್(ಸ) ನಿಮ್ಮೊಂದಿಗೆ ಮಾಡಿಕೊಂಡ ಒಪ್ಪಂದವನ್ನು ನೀವು ಮುರಿದಿದ್ದೀರಿ ಎಂದು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾರೆ. ಅಮ್ರ್ ಬಿನ್ ಜಹಾಶ್ ಛಾವಣಿಯ ಮೇಲೆ ಬಂಡೆ ಕಲ್ಲನ್ನು ಎಸೆಯಲು ಯೋಚಿಸಿದನು, ಅದರ ಬಗ್ಗೆ ಅಲ್ಲಾಹನು ತನ್ನ ಪ್ರವಾದಿಗೆ ತಿಳಿಸಿದನು. ನಿಮ್ಮ ಒಪ್ಪಂದವನ್ನು ನೀವು ಮುರಿದಿದ್ದೀರಿ. ಇದನ್ನು ಕೇಳಿದ ಅವರು ಬೆಚ್ಚಿಬಿದ್ದರು. ಮುಹಮ್ಮದ್ ಬಿನ್ ಮುಸ್ಲಿಮಹ್(ರ) ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ವಿವರಿಸುತ್ತಾ ಹೇಳಿದರು ಹಝ್ರತ್ ಪೈಗಂಬರ್(ಸ) ಹೇಳಿದರು: **ಉಖ್ರುಜೂ ಮಿನ್ ಬಲದೀ ಪಖದ್ ಅಜ್ಜಲ್‌ತುಕುಮ್ ಅಶ್ರನ್ ಫಮಂರ್‍ರುಯೀಯ ಬಅದ ಝಾಲಿಕ ಝುರಬ್ತು ಉನುಖಹೂ** ಅಂದರೆ: ನೀವೆಲ್ಲರು ನನ್ನ ನಗರದಿಂದ ಹೋರಹೋಗಿ ನಾನು ನಿಮಗೆ ಹತ್ತು ದಿನದ ಕಾಲಾವಕಾಶ ನೀಡುತ್ತೇನೆ. ಆ ನಂತರ ನಿಮ್ಮಲ್ಲಿ ಯಾರಾದರೂ ಇಲ್ಲಿ ಕಾಣಿಸಿಕೊಂಡರೆ ಅವರ ಕತ್ತು ಕೊಯ್ಯುಲಾಗುತ್ತದೆ. ಅದಕ್ಕೆ ಯಹೂದರು ಹೇಳಿದರು, ನಾವು ಔಸ್ ಗೋತ್ರದ ವ್ಯಕ್ತಿಯಿಂದ ಇಂತಹ ವಿಷಯವನ್ನು ಕೇಳುತ್ತೇವೆ ಎಂದು ಅವರು ಊಹಿಸಿರಲಿಲ್ಲ. ನೀನು ನಮ್ಮ ಪ್ರತಿಜ್ಞಬದ್ಧರಾಗಿದ್ದೀರಿ. ಅದಕ್ಕೆ ಮುಹಮ್ಮದ್ ಮುಸ್ಲಿಮ(ರ) ಹೇಳಿದರು: ಈಗ ಹೃದಯಗಳು ಬದಲಾಗಿವೆ. ಔಸ್ ಮತ್ತು ಖಝ್‌ರಜ್ ಅವರ ಮನಸ್ಸಿನಲ್ಲಿ ಯಹೂದಿಗಳ ಬಗ್ಗೆ ಪ್ರೀತಿ ಇತ್ತು, ಆದರೆ ಇಸ್ಲಾಂ ನಂತರ, ಅಲ್ಲಿ ಸರ್ವಶಕ್ತನಾದ ಅಲ್ಲಾಹನು ಹಾಗೂ ಅಲ್ಲಾಹನ ಸಂದೇಶವಾಹಕರು ಹಝ್ರತ್ ಪೈಗಂಬರ್(ಸ)ರ ಪ್ರೀತಿ ಇದೆ. ಹಝ್ರತ್ ಪೈಗಂಬರ್(ಸ)ರ ಸಂದೇಶವನ್ನು ಕೇಳಿದ ಯಹೂದಿಗಳು ಗಡಿಪಾರಾಗಲು ಸಿದ್ಧತೆಗಳನ್ನು ಆರಂಭಿಸಿದರು. ಬನೂನಝೀರ್‌ಗೆ ಕೆಲವು ದಿನಗಳ ಕಾಲಾವಕಾಶವನ್ನು ನೀಡಲಾಯಿತು, ಆದ್ದರಿಂದ ಅವರು ಗಡಿಪಾರಾಗಲು ತಯಾರಿ ಆರಂಭಿಸಿದರು. ಅವರ ಸವಾರಿಗಳು ಧಿ-ಜದ್ರ್‌ನಲ್ಲಿ ಹುಲ್ಲುಗಾವಲಿನಲ್ಲಿದ್ದವು. ಮದೀನಾದಿಂದ ಆರರಿಂದ ಎಂಟು ಮೈಲುಗಳಷ್ಟು ದೂರದಲ್ಲಿರುವ ಖುಬಾ'ನ ಉಪನಗರಗಳಲ್ಲಿ ಧಿ-ಜದ್ರ್ ಹುಲ್ಲುಗಾವಲು ಆಗಿತ್ತು. ಅವರು ಅಶ್‌ಜಾ ಗೋತ್ರದ ಕೆಲವು ಒಂಟೆಗಳನ್ನು ಸಾಲವಾಗಿ ಪಡೆಯಲು ಒತ್ತಾಯಿಸಿದರು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ-7, ಪುಟಗಳು 179-180, ಬಿಜ್ಮ್ ಇಕ್ಬಾಲ್, ಲಾಹೋರ್ 2022) (ಫರ್ಹಂಗ್-ಎ-ಸೀರತ್, ಪುಟ-85, ಝೋವರ್ ಅಕಾಡೆಮಿ ಕರಾಚಿ 2003)

ಯಹೂದಿಗಳು ಅಲ್ಲಿಂದ ಹೊರಡಲು ಸಿದ್ಧತೆಗಳನ್ನು ನಡೆಸುತ್ತಿರುವಾಗ ಕಪಟಿಗಳ ನಾಯಕ ಅಬ್ದುಲ್ಲಾ ಬಿನ್ ಉಬೈ ಬಿನ್ ಸುಲುಲ್ ಒಂದು ಉಪಾಯವನ್ನು ಮಾಡಿಡನು. ಮತ್ತು ಅವನ ಆ ಕುತಂತ್ರದಿಂದಾಗಿ ಅವರ ಹೃದಯಗಳು ಬದಲಾದವು. ಅದರ ವಿವರಣೆಯಲ್ಲಿ ಇತಿಹಾಸದಲ್ಲಿ ಹೀಗೆ ಬರೆಯಲಾಗಿದೆ: ಯಹೂದಿಗಳು ತಮ್ಮ ಸಿದ್ಧತೆಗಳಲ್ಲಿ ನಿರತರಾಗಿದ್ದಾಗ ಅವರ ಬಳಿ ಅಬ್ದುಲ್ಲಾ ಬಿನ್ ಉಬೈನ ಸಂದೇಶ ತಲುಪಿತು. ಸುವೈದ್ ಮತ್ತು ದಾಇಸ್ ಹೀಗೆ ಸಂದೇಶವನ್ನು ತಂದರು ಅದೇನೆಂದರೆ ಅಬ್ದುಲ್ಲಾ ಬಿನ್ ಉಬೈ ಹೇಳುತ್ತಿದ್ದಾನೆ ನೀವು ನಿಮ್ಮ ಮನೆಗಳನ್ನು ಬಿಟ್ಟು ಹೋಗಬೇಡಿ, ನಿಮ್ಮ ಕೋಟೆಗಳಲ್ಲಿಯೇ ಇರಿ, ನನ್ನೊಂದಿಗೆ ನನ್ನ ಖೌಮಿನ ಮತ್ತು ಇತರ ಅರಬ್ಬರ ಎರಡು ಸಾವಿರ ಜನರಿದ್ದಾರೆ ಅವರು ನಿಮ್ಮೊಂದಿಗೆ ನಿಮ್ಮ ಕೋಟೆಗಳನ್ನು ಪ್ರವೇಶಿಸುತ್ತಾರೆ. ಅವರಲ್ಲಿ ಕೊನೆಯವನು ಸಾಯುತ್ತಾನೆ, ಆದರೆ ಮುಸ್ಲಿಮರು ನಿಮ್ಮನ್ನು ತಲುಪಲು ಬಿಡುವುದಿಲ್ಲ. ನೂ ಖುರೈಝಾ ಸಹ ನಿಮಗೆ ಸಹಾಯ ಮಾಡುತ್ತಾರೆ. ನಿಮಗೆ ಮುಜುಗರವಾಗುವುದಿಲ್ಲ. ಬನೂ ಘತ್‌ಫಾನ್‌ನಿಂದ ನಿಮ್ಮ ಪ್ರತಿಜ್ಞಬದ್ಧರು ಸಹ ನಿಮಗೆ ಸಹಾಯ ಮಾಡುತ್ತಾರೆ ಮತ್ತು ನೀವು ಇಲ್ಲಿಂದ ಹೊರಡುವಂತೆ ಒತ್ತಾಯಿಸಿದರೆ, ನಿಮ್ಮೊಂದಿಗೆ ನಾವೂ ಇಲ್ಲಿಂದ ಹೊರಡುತ್ತೇವೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಕಪಟಿಗಳ ಈ ಕುತಂತ್ರ ಮತ್ತು ಕಪಟತ್ವವನ್ನು ವಿವರಿಸಿದ್ದಾನೆ ಮತ್ತು ಅದನ್ನು ವಿವರಿಸುತ್ತಾ ಅವನು ಹೀಗೆ ಹೇಳಿದನು:

**ಅಲಮ್ ತರ ಇಲಲ್ಲಝೀನ ನಾಫಖೂ ಯಖೂಲೂನ ಲಿಇಖ್ವಾನಿಹಿಮುಲ್ಲಝೀನ ಕಫರು ಮಿನ್ ಅಹ್‌ಲಿಲ್‌ಕಿತಾಬಿ ಲಇನ್ ಉಖ್ರಿಜ್‌ತುಮ್ ಲನಖ್ರುಜನ್ನ ಮಅಕುಮ್ ವಲಾ ನುತೀಉ ಫೀಕುಮ್ ಅಹದನ್ ಅಬದನ್, ವ ಇನ್ ಖುತಿಲ್‌ತುಮ್ ಲನನ್‌ಸುರನ್ನಕುಮ್. ವಲ್ಲಾಹು ಯಶ್‌ಹದು ಇನ್ನಹುಮ್ ಲಕಾಝಿಬೂನ-** (ಅಲ್‌ಹಶರ್: 12) ಅಂದರೆ: ಕಪಟಿಗಳನ್ನು ನೀನು ಕಂಡಿಲ್ಲವೇ? ಗ್ರಂಥದವರಲ್ಲಿ ಅವಿಶ್ವಾಸಿಗಳಾದ ತಮ್ಮ ಸಹೋದರರೊಡನೆ ಅವರು ಹೀಗೆ ಹೇಳುತ್ತಾರೆ: 'ನೀವು (ಮದೀನದಿಂದ) ಹೊರಕ್ಕಟ್ಟಲ್ಪಟ್ಟರೆ ಖಂಡಿತವಾಗಿಯೂ ನಾವು ಸಹ ನಿಮ್ಮೊಂದಿಗೆ ಹೊರಗೆ ಬರುವೆವು. ನಿಮ್ಮ ವಿರುದ್ಧವಾಗಿ ನಾವು ಯಾರಿಗೂ ಎಂದಿಗೂ ವಿಧೇಯರಾಗಲಾರೆವು.ನಿಮ್ಮೊಡನೆ ಯುದ್ಧ ಮಾಡಲ್ಪಟ್ಟರೆ ನಾವು ನಿಮಗೆ ನೆರವಾಗುವೆವು.ಆದರೆ ಅವರು ಸುಳ್ಳು ಹೇಳುವವರೆಂದು ಅಲ್ಲಾಹನು ಸಾಕ್ಷ್ಯ ನೀಡುತ್ತಾನೆ. (ದಾಎರಾ ಮುಆರಿಫ್, ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಾ ಸಲ್ಲಂ, ಸಂಪುಟ-7, ಪುಟ-180, ಬಿಜ್ಮ್ ಇಕ್ಬಾಲ್, ಲಾಹೋರ್, 2022) (ಅಲ್-ಇಕ್ತಿಫಾ, ಸಂಪುಟ-2, ಪುಟ-110, ಆಲಂ ಅಲ್-ಕುತುಬ್ ಬೈರುತ್)

ಅಬ್ದುಲ್ಲಾ ಬಿನ್ ಉಬಯ್ಯ್ ತನ್ನ ಸಂಗಡಿಗರಿಗೆ ಸಹಾಯ ಮಾಡಲು ಬನೂ ಖುರೈಝಾದ ಕಅಬ್ ಬಿನ್ ಅಸದ್ ಖುರಾಝಿಗೆ ಸಂದೇಶವನ್ನು

ಕಳುಹಿಸಿದನು. ಅವನು ಹಳೇಇದನು: ನಮ್ಮಲ್ಲಿ ಒಬ್ಬರೂ ಸಹ ಈ ಒಪ್ಪಂದವನ್ನು ಮುರಿಯಲು ಸಿದ್ಧರಿಲ್ಲ. ಅವರು ನಿರಾಕರಿಸಿದನು. ಅಬ್ದುಲ್ಲಾ ಬಿನ್ ಉಬಯ್ಯ್ ಬನು ಖುರೈಝಾ ಅವರೊಂದಿಗೆ ನಿರಾಶೆಗೊಂಡನು. ಅವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಬನೂ ನಝೀರ್ ನಡುವಿನ ಸಂಬಂಧದಲ್ಲಿ ತೀವ್ರಗೊಳಿಸಲು ಬಯಸಿದ್ದನು. ಹುಯ್ಯಗೆ ಸಂದೇಶಗಳನ್ನು ಕಳುಹಿಸುತ್ತಲೇ ಇದ್ದನು. ನಾವು ನಮ್ಮ ಮನೆಗಳನ್ನು ಬಿಟ್ಟು ಹೋಗುವುದಿಲ್ಲ, ನಮ್ಮ ಆಸ್ತಿಯನ್ನು ಬಿಟುವುದಿಲ್ಲ ನೀವು ಏನು ಬೇಕಾದರು ಮಾಡಿಕೊಳ್ಳಿ ಎಂಬ ಸಂದೇಶವನ್ನು ನಾನು ಮುಹಮ್ಮದ್(ಸ) ಅವರಿಗೆ ಕಳುಹಿಸುತ್ತಿದ್ದೇನೆ ಎಂದು ಹುಯ್ ಹೇಳಿದನು. ಸಲ್ಲಾಮ್ ಬಿನ್ ಮಿಶ್ಕಮ್ ಹುಯ್‌ಗೆ ಹೇಳಿದನು ಹುಯ್! ನಿನ್ನ ಆತ್ಮವು ನಿನಗೆ ಮೋಸ ಮಾಡಿದೆ. ನಿನ್ನ ಅಭಿಪ್ರಾಯವು ಮೂರ್ಖತನವಾಗಿದೆ ಎಂದು ನಾನು ಹೆದರದಿದ್ದರೆ, ನಾನು ನನ್ನ ವಿಧೇಯ ಯಹೂದಿಗಳೊಂದಿಗೆ ನಿನ್ನನ್ನು ಬಿಟ್ಟುಬಿಡುತ್ತಿದ್ದೆ. ಹುಯ್, ಹಾಗೆ ಮಾಡಬೇಡ. ಅವನಿಗೆ ಹೇಳಿದನು.

ಅಲ್ಲಾಹನಾಣೆ! ಮುಹಮ್ಮದ್ ಅಲ್ಲಾಹನ ಸತ್ಯವಂತ ಸಂದೇಶವಾಹಕರೆಂದು ನಮಗೆ ಸಹ ಗೊತ್ತಿದೆ. ಅವರ ಗುಣಗಳ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ನಾವು ಅವರನ್ನು ಅನುಸರಿಸದೇ ಇರಲು ಕಾರಣ ನಾವು ಅವರ ಬಗ್ಗೆ ಅಸೂಯೆ ಹೊಂದಿದ್ದೇವೆ ಎಂಬುದಾಗಿದೆ. ಏಕೆಂದರೆ ಪ್ರವಾದಿತ್ವ ಬನೂ ಹಾರೂನ್‌ರಿಂದ ಬಿಟ್ಟು ಹೋಗಿದೆ. ಬನ್ನಿರಿ ನಾವು ಅವರು ದಯಪಾಲಿಸಿದ ಸಂರಕ್ಷಣೆಯನ್ನು ಸ್ವೀಕರಿಸೋಣ.

ಅವರ ಪಟ್ಟಣದಿಂದ ಹೊರಡೋಣ. ಅವರ ಜೊತೆ ಮೋಸ ಮಾಡೋದಕ್ಕೆ ನನ್ನ ವಿರೋಧ ಮಾಡ್ತಿರೋದು ನಿಮಗೂ ಗೊತ್ತು. ನಾವು ಇಲ್ಲಿಂದ ಹೊರಟು ಹಣ್ಣುಗಳು ಹಣ್ಣಾದಾಗ ನಾವು ಬರುತ್ತೇವೆ ಅಥವಾ ನಮ್ಮಲ್ಲಿ ಒಬ್ಬರು ಅವರ ಹಣ್ಣಿನ ಬಳಿಗೆ ಬಂದು ಮಾರಾಟ ಮಾಡುತ್ತಾರೆ ಅಥವಾ ಅದರೊಂದಿಗೆ ತನಗೆ ಬೇಕಾದುದನ್ನು ಮಾಡಿ ನಂತರ ನಮ್ಮ ಬಳಿಗೆ ಬರುತ್ತಾರೆ. ಆದ್ದರಿಂದ ನಾವು ನಮ್ಮ ನಗರವನ್ನು ತೊರೆದಂತೆ ಆಗುವುದಿಲ್ಲ, ಏಕೆಂದರೆ ನಮ್ಮ ಆಸ್ತಿ ನಮ್ಮ ಕೈಯಲ್ಲಿರುತ್ತದೆ. ನಮ್ಮ ಸಮುದಾಯಕ್ಕೆ ನಮ್ಮ ಗೌರವವು ನಮ್ಮ ಸಂಪತ್ತು ಮತ್ತು ಕಾರ್ಯಗಳಿಗೆ ಕಾರಣವಾಗಿದೆ. ನಮ್ಮ ಸಂಪತ್ತು ನಮ್ಮ ಕೈಬಿಟ್ಟಾಗ, ನಾವು ಇತರ ಯಹೂದಿಗಳಂತೆ ಅವಮಾನಕ್ಕೊಳಗಾಗುತ್ತೇವೆ, ಆದರೆ ಮುಹಮ್ಮದ್(ಸ) ನಮ್ಮ ಬಳಿಗೆ ಬಂದರೆ ಮತ್ತು ಅವರು ನಮ್ಮ ಈ ಕೋಟೆಯನ್ನು ಒಂದು ದಿನ ಮುತ್ತಿಗೆ ಹಾಕಿದರೆ ಅವರು ಈಗ ಕಳುಹಿಸಿರುವ ಸಂದೇಶವನ್ನು ಸ್ವೀಕರಿಸುವುದಿಲ್ಲ ಅವರು ಅದನ್ನು ತಿರಸ್ಕರಿಸುತ್ತಾರೆ. ಹುಯ್ ಇಬ್ನೆ ಅಖ್ತಬ್ ಹೇಳಿದನು: ಮುಹಮ್ಮದ್(ಸ)ರು ಅವಕಾಶ ಲಭಿಸಿದಾಗ ಮಾತ್ರ ನಮ್ಮನ್ನು ಮುತ್ತಿಗೆ ಹಾಕುತ್ತಾರೆ, ಇಲ್ಲದಿದ್ದರೆ ಅವರು ಹಿಂತಿರುಗುತ್ತಾರೆ. ಅಬ್ದುಲ್ಲಾ ಬಿನ್ ಉಬಯ್ಯ್ ಕೂಡ ನನಗೆ ಭರವಸೆ ನೀಡಿರುವುದನ್ನು ನೀವು ನೋಡಲಿಲ್ಲವೇ.

ಸಲ್ಲಾಮ್ ಬಿನ್ ಮಿಶಕಮ್ ಹೇಳಿದರು: ಅಬ್ದುಲ್ಲಾ ಬಿನ್ ಉಬೈನ ಹೇಳಿಕೆಗೆ ಯಾವುದೇ ಸ್ಥಾನಮಾನವಿಲ್ಲ. ನೀವು ಮುಹಮ್ಮದ್(ಸ)ರ ವಿರುದ್ಧ ಹೋರಾಡುವವರೆಗೂ ಅವನು ನಿಮ್ಮನ್ನು ಸಾವಿನ ಕೂಪಕ್ಕೆ ಎಸೆಯಲು ಬಯಸುತ್ತಾನೆ. ಅವನು ತನ್ನ ಮನೆಯಲ್ಲಿಯೇ ಕುಳಿತಿರುವನು ಮತ್ತು ನಿಮ್ಮನ್ನು ಬಿಟ್ಟು ಬಿಡುವನು.

ಅಬ್ದುಲ್ಲಾ ಬಿನ್ ಉಬೈ ಕಅಬ್‌ನಿಂದ ಸಹಾಯವನ್ನು ಯಾಚಿಸಿದನು, ಆದರೆ ಕಅ್‌ಬ್ ನಿರಾಕರಿಸಿದರು. ನಾನು ಬದುಕಿರುವಾಗ ಬನೂ ಖುರೈಝಾದ ಒಬ್ಬ ವ್ಯಕ್ತಿಯೂ ಈ ಒಪ್ಪಂದವನ್ನು ಮುರಿಯುವುದಿಲ್ಲ ಎಂದು ಕಅಬ್ ಹೇಳಿದರು. ಅಬ್ದುಲ್ಲಾ ಬಿನ್ ಉಬೈ ತನ್ನ ಪ್ರತಿಜ್ಞಬದ್ಧರಾದ ಬನೂ ಖುರೈಝಾ ಅವರಿಗೆ ಇದೇ ರೀತಿಯ ಭರವಸೆಯನ್ನು ನೀಡಿದನು. ಅವರೂ ಸಹ ಯುದ್ಧವಾಡುವುದಕ್ಕೆ ಪ್ರಯತ್ನಿಸಿದರು. ವಾಗ್ದಾನವನ್ನು ಕೈಬಿಟ್ಟರು. ಅವರು ಸ್ವತಃ ತಮ್ಮ ಕೋಟೆಗಳಲ್ಲಿ ತಮ್ಮನ್ನು ಮುತ್ತಿಗೆ ಹಾಕಿದರು. ಅವರು ಅಬ್ದುಲ್ಲಾ ಬಿನ್ ಉಬೈನ ಸಹಾಯಕ್ಕಾಗಿ ಕಾಯುತ್ತಿದ್ದರು ಆದರೆ ಅವನು ತನ್ನ ಮನೆಯಲ್ಲಿಯೇ ಕುಳಿತಿದ್ದನು. ಮುಹಮ್ಮದ್(ಸ) ಅವರ ಕಡೆಗೆ ಹೋದರು ಮತ್ತು ಅವರು ತಮ್ಮ ಆದೇಶಗಳಿಗೆ ವಿಧೇಯರಾಗಲು ಒತ್ತಾಯಿಸುವವರೆಗೂ ಅವರನ್ನು ಮುತ್ತಿಗೆ ಹಾಕಿದರು.

ಇಬ್ನ್ ಉಬೈ ತನ್ನ ಮಿತ್ರರಿಗೆ ಸಹಾಯ ಮಾಡಲಿಲ್ಲ, ನಾವು ಅವನೊಂದಿಗೆ ನಮ್ಮ ಕತ್ತಿಗಳಿಂದ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದೇವೆ. ಈಗ ಆ ಯುದ್ಧದ ಸರಣಿ ಮುಗಿದಿದೆ. ಮುಹಮ್ಮದ್(ಸ.ಅ) ಆಗಮಿಸಿದ್ದಾರೆ ಮತ್ತು ಅವರ ನಡುವೆ ಅಂದರೆ ಯುದ್ಧಗಳನ್ನು ತಡೆಯಲಾಗಿದೆ. ಇಬ್ನ್ ಉಬೈ ಯಹೂದಿಯೂ ಅಲ್ಲ ಅಥವಾ ಮುಸಲ್ಮಾನನೂ ಅಲ್ಲ. ಅವನು ತಮ್ಮ ಸಮುದಾಯದ ಧರ್ಮದ ಮೇಲೂ ಇಲ್ಲ. ನಾವು ಅದನ್ನು ಹೇಗೆ ಒಪ್ಪಿಕೊಳ್ಳಬಹುದು? ಹುಯ್ ಹೇಳಿದನು: ನಾನು ಮುಹಮ್ಮದ್(ಸ.ಅ) ಅವರೊಂದಿಗೆ ದ್ವೇಷವನ್ನು ಮುಂದುವರಿಸುತ್ತೇನೆ ಮತ್ತು ಅವರೊಂದಿಗೆ ಹೋರಾಡುವುದನ್ನು ಮುಂದುವರಿಸುತ್ತೇನೆ. ಸಲ್ಲಾಮ್ ಹೇಳಿದರು: ಹಾಗಾದರೆ ನಾವು ನಮ್ಮ ನೆಲದಿಂದ ಗಡಿಪಾರು ಆಗಬೇಕಾಗುತ್ತದೆ. ನಮ್ಮ ಸಂಪತ್ತು ಮತ್ತು ಗೌರವವು ಕಣ್ಮರೆಯಾಗುತ್ತದೆ. ನಮ್ಮ ಮಕ್ಕಳು ಕೈದಿಗಳಾಗುತ್ತಾರೆ ಮತ್ತು ನಮ್ಮ ಯೋಧರು ಕೊಲ್ಲಲ್ಪಡುತ್ತಾರೆ. ಆದರೆ ಹುಯ್ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೋರಾಡುವುದನ್ನು ಹೊರತುಪಡಿಸಿ ನಿರಾಕರಿಸಿದರು. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟಗಳು 320-321, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್, 1993)

ಸಾರುಕ್ ಬಿನ್ ಅಬಿ ಹುಕೀಖ್ ಯಹೂದಿ ಸಮುದಾಯದ ಮುದುಕನಾಗಿದ್ದ ಮತ್ತು ಕಡಿಮೆ ಬುದ್ಧಿಮತ್ತೆಯನ್ನು ಹೊಂದಿದ್ದನು ಅವನು ಹೇಳಿದನು: ಎಲೈ ಹುಯ್! ನೀನೊಬ್ಬ ದುಷ್ಟ ಮನುಷ್ಯ. ನೀನು ಬನೂ ನಝೀರ್‌ನನ್ನು ನಾಶಮಾಡುವೆ. ಹುಯ್ ಕೋಪಗೊಂಡನು. ಬನೂ ನಝೀರ್‌ನವರೆಲ್ಲರೂ ಮಾತನಾಡುತ್ತಿದ್ದಾರೆ, ಈ ಹುಚ್ಚ ಮತ್ತು ಮೂರ್ಖ ಮನುಷ್ಯನೂ ನನ್ನನ್ನು ದೂಷಿಸುತ್ತಿದ್ದಾನೆ ಎಂದು ಅವನು ಹೇಳಿದನು. ಸಾರುಕ್ ಅನ್ನು ಅವನ ಸಹೋದರರು ಕೊಂದರು ಮತ್ತು ಹುಯ್ಯಿಗೆ ಹೇಳಿದರು, ನಾವು ನಿಮ್ಮ ಅಧೀನದಲ್ಲಿದ್ದೇವೆ. ನಾವು ನಿಮ್ಮನ್ನು ಎಂದಿಗೂ ವಿರೋಧಿಸುವುದಿಲ್ಲ. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ-7, ಪುಟ-45, ಮಕ್ತಬ ದಾರುಸ್ಸಲಾಮ್ ರಿಯಾದ್, 1435 ಹಿಜರಿ) (ದಾಎರಾ ಮುಆರಿಫ್, ಸೀರತ್ ಮುಹಮ್ಮದ್ ರಸುಲುಲ್ಲಾ(ಸ), ಸಂಪುಟ-7, ಪುಟ-181. ಬಿಜ್ಮ್ ಇಕ್ಬಾಲ್ ಲಾಹೋರ್ 2022)

ನಂತರ ಹುಯ್ ತನ್ನ ಸಹೋದರ ಜುದೈ ಬಿನ್ ಅಖ್ತಬ್ ನನ್ನು ಸಂದೇಶವಾಹಕನಾಗಿ ಕಳುಹಿಸಿ, ನಾವು ಇಲ್ಲಿಂದ ಹೋಗುವುದಿಲ್ಲ ಮತ್ತು ನಿಮ್ಮ ಕೈಲಾದಷ್ಟು ಮಾಡಿ ಎಂದು ಮುಸ್ಲಿಮರ ನಾಯಕನಿಗೆ ತಿಳಿಸಿದನು.

ಜುದೈ ಮದೀನಾಗೆ ತಲುಪಿ ಹುಯ್‌ನ ಸಂದೇಶವನ್ನು ತಿಳಿಸಿದನು. ಹಝ್ರತ್ ಪೈಗಂಬರ್(ಸ) ಅವರು ಸಹಬಗಳೊಂದಿಗೆ ಕುಳಿತಿದ್ದರು. ಹಝ್ರತ್ ಪೈಗಂಬರ್(ಸ)ರು ಆತನ ಮಾತನ್ನು ಆಲಿಸಿದ ನಂತರ ಅಲ್ಲಾಹು ಅಕ್ಬರ್ ಎಂದು ದೊಡ್ಡ ಧ್ವನಿಯಲ್ಲಿ ಹೇಳಿದರು ಮತ್ತು ಮುಸ್ಲಿಮರು ಸಹ ಅಲ್ಲಾಹುಅಕ್ಬರ್ ಎಂದು ಘೋಷಣೆಯನ್ನೂ ಕೂಗಿದರು.

ಹಝ್ರತ್ ಪೈಗಂಬರ್(ಸ)ರು ಹೇಳಿದರು: **ಹಾರಬತಿಲ್ ಯಹೂದು**. ಅಂದರೆ ಯಹೂದಿಗಳು ಯುದ್ಧ ಘೋಷಿಸಿದ್ದಾರೆ.

ಹಝ್ರತ್ ಪೈಗಂಬರ್(ಸ) ಬನೂ ನಝೀರ್ ಅವರ ಈ ಕ್ರಮಗಳಿಗೆ ಪ್ರತಿಕ್ರಿಯೆಯಾಗಿ ಬನೂ ನಝೀರ್ ಮೇಲೆ ದಾಳಿ ಮಾಡಲು ಘೋಷಿಸಿದರು ಮತ್ತು ಯುದ್ಧ ಘೋಷಿಸಿದರು. ಯಹೂದಿಗಳ ಅದೇ ಸಂದೇಶವಾಹಕ ಜುದೈ ಬಿನ್ ಅಖ್ತಾಬ್ ತಕ್ಷಣವೇ ಅಬ್ದುಲ್ಲಾ ಬಿನ್ ಉಬೈನ ಮನೆಗೆ ತಲುಪಿದನು ಮತ್ತು ಹಝ್ರತ್ ಪೈಗಂಬರ್(ಸ) ಅವರೊಂದಿಗಿನ ಸಂಭಾಷಣೆ ಮತ್ತು ಪರಿಸ್ಥಿತಿಯ ಬಗ್ಗೆ ತಿಳಿಸಿದನು. ಇವನು ತನ್ನ ಮನೆಯಲ್ಲಿ ಗೆಳೆಯರೊಂದಿಗೆ ಹರಟೆ ಹೊಡೆಯುವುದರಲ್ಲಿ ನಿರತನಾಗಿದ್ದನು. ಅವನು ಹೇಳಿದನು: ಸರಿ ಹೋಗು, ನಾನು ನನ್ನ ಪ್ರತಿಜ್ಞಾಬದ್ಧರಿಗೆ ಸಂದೇಶವನ್ನು ಕಳುಹಿಸುತ್ತೇನೆ ಅವರು ನಿಮ್ಮೊಂದಿಗೆ ಕೋಟೆಗಳನ್ನು ಪ್ರವೇಶಿಸುತ್ತಾರೆ. ಇಬ್ನ್ ಉಬೈನ ಪುತ್ರ ಹಝ್ರತ್ ಅಬ್ದುಲ್ಲಾ ರಕ್ಷಾಕವಚವನ್ನು ಧರಿಸಿ ಕತ್ತಿಯನ್ನು ಹಿಡಿದುಕೊಂಡು ಇಸ್ಲಾಮಿನ ಸೈನ್ಯವನ್ನು ಸೇರಲು ಓಡುತ್ತಿರುವುದನ್ನು ಈ ರಾಯಭಾರಿ ನೋಡಿದನು. ಈ ಸಂದರ್ಭದಲ್ಲಿ ಜುದೈ ಸಹಕಾರದ ಹತಾಶನಾದನು. ಅವನು ತಕ್ಷಣವೇ ಹುಯ್ ಬಳಿಗೆ ಬಂದು ಎಲ್ಲಾ ವಿಷಯಗಳನ್ನು ತಿಳಿಸಿದನು ಅಂದರೆ ಹಝ್ರತ್ ಪೈಗಂಬರ್(ಸ) ನಿಮ್ಮ ಮಾತನ್ನು ಕೇಳಿ ಯಹೂದಿಯರು ಯುದ್ಧ ಘೋಷಿಸಿದರು ಎಂದು ಹೇಳಿದರು. ನಂತರ ಅಲ್ಲಾಹು ಅಕ್ಬರ್ ಎಂದು ತಕ್ಬೀರ್ ಘೋಷಣೆ ಕೂಗುತ್ತಲೇ ಸಿದ್ಧತೆಯನ್ನು ಪ್ರಕಟಿಸಿದರು. ಅವನಿಗೆ ಇನ್ನೂ ವಿಶ್ವಾಸಬರಲಿಲ್ಲ. ಇದು ಅವರ ಯುದ್ಧ ತಂತ್ರವಾಗಿದೆ ಎಂದು ಹೇಳಿದನು. ಮತ್ತೆ ಹುಯ್ ಕೇಳಿದನು ಅಬ್ದುಲ್ಲಾ ಬಿನ್ ಉಬೈ ಏನು ಹೇಳಿದನು? ಇಬ್ನೆ ಅಬಿ ಅವರೊಂದಿಗಿನ ಸಂಭಾಷಣೆಯನ್ನು ವಿವರಿಸಿದನು ಅವನು ಹೇಳಿದನು: ನಾನು ನನ್ನ ಪ್ರತಿಜ್ಞಬದ್ಧರಿಗೆ ಸಂದೇಶವನ್ನು ಕಳುಹಿಸುತ್ತೇನೆ, ಅವರು ನಿಮ್ಮೊಂದಿಗೆ ಕೋಟೆಗಳನ್ನು ತಲುಪುತ್ತಾರೆ. ಜುದೈ ಹೇಳಿದನು, ಓ ಸಹೋದರನೇ!! ನಾನು ಅವನ ಸಹಾಯದಿಂದ ಹತಾಶನಾಗಿದ್ದೇನೆ.

ಮತ್ತೊಂದೆಡೆ, ಹಝ್ರತ್ ಪೈಗಂಬರ್(ಸ) ಕೋಟೆಗಳನ್ನು ಮುತ್ತಿಗೆ ಹಾಕಲು ಸಹಾಬಗಳಿಗೆ ಆದೇಶಿಸಿದರು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ರಸುಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಾ ಸಲ್ಲಂ, ಸಂಪುಟ-7, ಪುಟ 181-182, ಬಿಜ್ಮ್ ಇಕ್ಬಾಲ್ ಲಾಹೋರ್ 2022)

ಇದರ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ:

“ಹಝ್ರತ್ ಪೈಗಂಬರ್(ಸ) ಔಸ್ ಗೋತ್ರದ ಒಬ್ಬ ಸರದಾರನಾದ ಮುಹಮ್ಮದ್ ಬಿನ್ ಮಸ್‌ಲಮರನ್ನು ಕರೆದು ಹೀಗೆ ಹೇಳಿದರು: ನೀವು ಬನೂ ನಝೀರ್ ಗೋತ್ರದ ಬಳಿಗೆ ಹೋಗಿರಿ. ಅವರೊಡನೆ ಈ ವಿಷಯದ ಕುರಿತು ಮಾತುಕತೆ ನಡೆಸಿರಿ. ಅವರು ತಮ್ಮ ದ್ರೋಹ ಮತ್ತು ಮೋಸಗಾರಿಕೆಯಲ್ಲಿ ಮಿತಿ ಮೀರಿದ್ದಾರೆ. ಆದ್ದರಿಂದ ಅವರು ಮದೀನದಲ್ಲಿ ಇರುವುದು ಸರಿಯಲ್ಲ ಎಂದು ಅವರೊಡನೆ ಹೇಳಿರಿ. ಅವರು ಮದೀನವನ್ನು ಬಿಟ್ಟು ಬೇರೆ ಎಲ್ಲಾದರೂ ನೆಲೆಸುವುದು ಉತ್ತಮ. ಹಝ್ರತ್ ಪೈಗಂಬರ್(ಸ) ಅದಕ್ಕಾಗಿ ಅವರಿಗೆ ಹತ್ತು ದಿನಗಳ ಕಾಲಾವಧಿಯನ್ನು ನಿಗದಿಪಡಿಸಿದರು. ಮುಹಮ್ಮದ್ ಬಿನ್ ಮಸ್‌ಲಮ(ರ) ಅವರ ಬಳಿಗೆ ಹೋದಾಗ ಅವರು ಮುಸ್ಲಿಮರ ಮುಂದೆ ಬಹಳ ಅಹಂಕಾರದಿಂದ ವರ್ತಿಸಿದರು ಮತ್ತು ಹೀಗೆ ಹೇಳಿದರು: ನಾವು ಮದೀನ ಬಿಟ್ಟು ಹೋಗಲು ತಯಾರಲ್ಲವೆಂದು ಮುಹಮ್ಮದ್‌ರೊಡನೆ(ಸ) ಹೇಳಿರಿ. ನೀವು ಮಾಡಬೇಕಾದದ್ದನ್ನು ಮಾಡಿರಿ. ಅವರ ಈ ಉತ್ತರ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿದಾಗ ಹಝ್ರತ್ ಪೈಗಂಬರ್(ಸ) ಅನಿಯಂತ್ರಿತವಾಗಿ ಹೀಗೆ ಹೇಳಿದರು: ಅಲ್ಲಾಹು ಅಕ್ಬರ್, ಯಹೂದಿಯರು ಯುದ್ಧಕ್ಕಾಗಿ ತಯಾರಾಗಿ ಕುಳಿತಿರುವರು. ಅನಂತರ ಹಝ್ರತ್ ಪೈಗಂಬರ್(ಸ) ಮುಸ್ಲಿಮರೊಡನೆ ತಯಾರಾಗಲು ಆದೇಶ ನೀಡಿದರು ಮತ್ತು ಸಹಾಬಿಯರ ಒಂದು ಸಂಘದೊಂದಿಗೆ ಬನೂ ನಝೀರಿನ ವಿರುದ್ಧ ಮೈದಾನಕ್ಕೆ ಹೊರಟರು. (ಸೀರತ್ ಖಾತಮುನ್ನಬೀಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-523-524)

ರಾಜ್ಯದ ಸರದಾರನನ್ನು ವಧಿಸಲು ಯೋಜನೆ ಹಾಕಿದ್ದ ರಾಜ್ಯದ ಆ ದುಷ್ಟ ಬಂಡಾಯಗಾರರನ್ನು ದಮನಿಸಬೇಕಾದುದು ಅಗತ್ಯವಾಗಿತ್ತು. ಏಕೆಂದರೆ ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ರಾಜ್ಯದ ಸರದಾರರಾಗಿದ್ದರು. ಆ ದುಷ್ಟರು ಪಶ್ಚಾತ್ತಾಪಪಡುವುದಕ್ಕೆ ಬದಲಾಗಿ ಆಯುಧ ಧರಿಸಿ ಯುದ್ಧದ ಘೋಷಣೆ ಮಾಡಿದ್ದರು. ಮದೀನವನ್ನು ಒಂದು ದೊಡ್ಡ ರಕ್ತಪಾತದಿಂದ ರಕ್ಷಿಸಲು ಹಾಗೂ ಮದೀನವನ್ನು ಸಂರಕ್ಷಿಸಲು ಬಂಡಾಯಗಾರರನ್ನು ತಡೆಯುವುದು ಅಗತ್ಯವಾಗಿ ಬಿಟ್ಟಿತ್ತು. ಆದ್ದರಿಂದ ಯಾವುದೇ ನಿರ್ವಾಹವಿಲ್ಲದೇ ಹಝ್ರತ್ ಪೈಗಂಬರ್(ಸ)ರಿಗೆ ಅವರ ವಿರುದ್ಧ ಯುದ್ಧ ಮೈದಾನಕ್ಕೆ ಹೊರಡಬೇಕಾಗಿ ಬಂತು. ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಇಬ್ನು ಮಕ್‌ತೂಮ್‌ರನ್ನು ತನ್ನ ಪ್ರತಿನಿಧಿಯನ್ನಾಗಿ ನಿಶ್ಚಯಿಸಿದರು ಮತ್ತು ಮದೀನದಿಂದ ಹೊರಟು ಬನೂ ನಝೀರ್ ಗೋತ್ರದ ಗ್ರಾಮಕ್ಕೆ ಮುತ್ತಿಗೆ ಹಾಕಿದರು. ಹಝ್ರತ್ ಅಲಿ(ರ)ರನ್ನು ಹಝ್ರತ್ ಪೈಗಂಬರ್(ಸ) ಸೈನ್ಯದ ಅಮೀರನ್ನಾಗಿ, ಮತ್ತೊಂದು ಹೇಳಿಕೆಯ ಪ್ರಕಾರ ಹಝ್ರತ್ ಅಬೂಬಕರ್(ರ)ರನ್ನು ಅಮೀರ್ ಆಗಿ ನಿಶ್ಚಯಿಸಿದರು. ಅಂತೂ ಮುಸ್ಲಿಮರು ಮುತ್ತಿಗೆ ಮಾಡಿಕೊಂಡು ಮತ್ತು ಪದೇ ಪದೇ ತಕ್ಬೀರ್ ಘೋಷಣೆ ಮಾಡಿಕೊಂಡು ರಾತ್ರಿ ಕಳೆದರು. ಬೆಳಿಗ್ಗೆಯಾದಾಗ ಹಝ್ರತ್ ಬಿಲಾಲ್(ರ) ಫಜ್ರಿನ ಅಧಾನ್ ಕೊಟ್ಟರು. ಆಗ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಇದ್ದ ಹತ್ತು ಸಹಾಬಿಯರ ಜೊತೆಗೆ ಸೇನಾ ತಾಣಕ್ಕೆ ಮರಳಿ ಬಂದರು. ಹಝ್ರತ್ ಪೈಗಂಬರ್(ಸ) ಫಜ್ರ್ ನಮಾಝಿಗೆ ಇಮಾಮತ್ ವಹಿಸಿದರು. ಯಹೂದಿಯರಲ್ಲಿ ಒಬ್ಬ ವ್ಯಕ್ತಿಯ ಹೆಸರು ಅಝ್ಬಕ್ ಎಂದಾಗಿತ್ತು. ಆತನು ಹಝ್ರತ್ ಪೈಗಂಬರ್(ಸ)ರ ಡೇರೆಯನ್ನು ಗುರಿಯಾಗಿಸಿಕೊಂಡು ಬಾಣ ಎಸೆದನು. ಆ ಬಾಣ ಡೇರೆಗೆ ತಗುಲಿತು. ಹಝ್ರತ್ ಪೈಗಂಬರ್(ಸ) ಡೇರೆಯನ್ನು ಅಲ್ಲಿಂದ ಸರಿಸಿ ಬಿಲ್ಲುಗಾರರಿಂದ ದೂರದಲ್ಲಿ ಡೇರೆ ಹಾಕಲು ಆದೇಶ ನೀಡಿದರು. (ಸೀರತ್ ಹಲಾಬಿಯಾಹ್, ಸಂಪುಟ-2, ಪುಟ-359, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್, ಲೆಬನಾನ್, 2008) (ಕಿತಾಬ್ ಅಲ್-ಮಘಾಜಿ, ಸಂಪುಟ-1, ಪುಟ-314, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್, ಲೆಬನಾನ್, 2003)

ನಂತರ ರಾತ್ರಿಯಾಯಿತು. ಅಬ್ದುಲ್ಲಾ ಬಿನ್ ಉಬೈ ಬನೂ ನಝೀರ್ ಅವರ ಬಳಿಗೆ ಬರಲಿಲ್ಲ ಮತ್ತು ಅವನ ಯಾವುದೇ ಮಿತ್ರರು ಸಹ ಅವರ ಬಳಿಗೆ ಬರಲಿಲ್ಲ ಮತ್ತು ಅವನು ತನ್ನ ಮನೆಯಲ್ಲಿಯೇ ಕುಳಿತುಕೊಂಡನು. ಬನೂ ನಝೀರ್ ಅವರ ನೆರವಿನಿಂದ ನಿರಾಶೆಗೊಂಡರು. ಸಲ್ಲಾಮ್ ಬಿನ್ ಮಿಶ್ಕಾಮ್ ಮತ್ತು ಕಿನಾನಾ ಬಿನ್ ಸುವೈರಾ ಅವರು ಹಯ್ಯ್‌ಗೆ ಹೇಳಿದರು, ನೀನು ಯೋಚಿಸಿದ ಇಬ್ನ್ ಉಬೈಯ ಸಹಾಯ ಎಲ್ಲಿಗೆ ಹೋಯಿತು? ಹುಯ್ ಹೇಳಿದನು: ನಾನು ಈಗ ಏನು ಮಾಡಬೇಕು. ಇದು ನನ್ನ ಹಣೆಬರಹದಲ್ಲಿ ಬರೆದಿರುವ ಸಾವಾಗಿದೆ.

(ಸಬ್ಲುಲ್ ಹುದಾ ವಾಲ್-ರಶಾದ್, ಸಂಪುಟ-4, ಪುಟ-322, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್, 1993)

ಅದೇ ವೇಳೆ ಒಂದು ರಾತ್ರಿ ಇಶಾದ ಸಮಯದಲ್ಲಿ ಹಝ್ರತ್ ಅಲಿ(ರ) ಸೇನೆಯಲ್ಲಿ ಕಂಡು ಬರಲಿಲ್ಲ. ಯಾ ರಸೂಲಲ್ಲಾಹ್, ಅಲಿ(ರ) ಎಲ್ಲೂ ಕಂಡು ಬರುತ್ತಿಲ್ಲವೆಂದು ಜನರು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಅವರ ಬಗ್ಗೆ ಚಿಂತಿಸಬೇಡಿರಿ. ಏಕೆಂದರೆ ಅವರು ನಿಮ್ಮದೇ ಕೆಲಸಕ್ಕಾಗಿ ಹೋಗಿರುವರು. ಸ್ವಲ್ಪ ಸಮಯ ಕಳೆದಾಗ ಹಝ್ರತ್ ಪೈಗಂಬರ್(ಸ)ರ ಡೇರೆಯ ತನಕ ಯಾರ ಬಾಣ ತಲುಪಿತೋ ಆತನ ತಲೆಯನ್ನು ಹಝ್ರತ್ ಅಲಿ(ರ) ಕಡಿದು ತಂದರು. ಆತನ ಹೆಸರು ಅಝ್ಬಕ್ ಎಂದಾಗಿತ್ತು. ಹಝ್ರತ್ ಅಲಿ(ರ) ಅದೇ ವೇಳೆ ಆತನನ್ನು ಕೊಲ್ಲಲ್ಲು ಹೊಂಚು ಹಾಕಿ ಕುಳಿತುಕೊಂಡಿದ್ದರು. ಆತನು ಮುಸ್ಲಿಮರ ದೊಡ್ಡ ಸರದಾರರಲ್ಲಿ ಯಾರನ್ನಾದರೂ ವಧಿಸಲು ಹೋಗಿದ್ದನು. ಆತನ ಜೊತೆಗೆ ಒಂದು ಸಂಘವಿತ್ತು. ಹಝ್ರತ್ ಅಲಿ(ರ) ಆತನ ಮೇಲೆ ದಾಳಿ ನಡೆಸಿದರು ಮತ್ತು ಆತನನ್ನು ವಧಿಸಿದರು. ಆತನ ಜೊತೆಗೆ ಇದ್ದ ಇತರ ಎಲ್ಲ ಜನರು ಪರಾರಿಯಾದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ(ರ)ರ ಜೊತೆಗೆ ಹತ್ತು ವ್ಯಕ್ತಿಗಳ ಒಂದು ಸಂಘವನ್ನು ಕಳುಹಿಸಿದ್ದರು. ಅವರಲ್ಲಿ ಹಝ್ರತ್ ಅಬೂದುಜಾನ(ರ) ಮತ್ತು ಹಝ್ರತ್ ಸಹಲ್ ಬಿನ್ ಹುನೈಫ್(ರ) ಸಹ ಇದ್ದರು. ಹಝ್ರತ್ ಅಲಿ(ರ)ರನ್ನು ನೋಡಿ ಪರಾರಿಯಾಗಿದ್ದ ಅಝ್ಬಕ್‌ನ ಜೊತೆಗಾರರನ್ನು ಆ ಸಂಘದವರು ಹೋಗಿ ಹಿಡಿಗೂಡಿದರು. ಸಹಾಬಿಯರ ಸಂಘ ಅವರೆಲ್ಲರನ್ನೂ ವಧಿಸಿದರು. ಕೆಲವು ಉಲೇಮಾಗಳು, ಆ ಸಂಘದಲ್ಲಿ ಹತ್ತು ವ್ಯಕ್ತಿಗಳಿದ್ದರು ಎಂದು ಹೇಳಿರುವರು. ಸಹಾಬಿಯರು ಅವರನ್ನು ವಧಿಸಿ ಅವರ ತಲೆಗಳನ್ನು ತಂದರು. ಅವುಗಳನ್ನು ಅನಂತರ ಬೇರೆ ಬೇರೆ ಬಾವಿಗಳಲ್ಲಿ ಹಾಕಲಾಯಿತು. (ಸೀರತ್ ಹಲಬೀಯಾ, ಸಂಪುಟ-2, ಪುಟ-359, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ ಲಡಬನಾನ್ 2008)

ಒಂದು ಹೇಳಿಕೆಯ ಪ್ರಕಾರ ಆ ತಲೆಗಳನ್ನು ಬನೂ ಖತ್‌ಮದ ಬಾವಿಗಳಿಗೆ ಬೀಸಾಕಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರು.

(ಕಿತಾಬುಲ್ ಮಘಾಝಿ, ಸಂಪುಟ-1, ಪುಟ-315, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ ಲೆಬನಾನ್ 2003)

ಇದರ ವಿವರಣೆ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

(ಖುತ್ಬ ಸಾನಿಯದ ನಂತರ ಮಸೀದಿಯಲ್ಲಿ ಬಾಜಮಾಅತ್ ನಮಾಝ್ ನಿರ್ವಹಿಸುವುದರ ಕುರಿತು ಹುಝೂರ್ ಹೀಗೆ ಹೇಳಿದರು:) ನೀವು ನಮಾಝಿನ ಸಫ್ಫುಗಳಲ್ಲಿ ನಿಲ್ಲುವಾಗ ಭುಜಕ್ಕೆ ಭುಜ ಸೇರಿಸಿ ನಿಲ್ಲುವುದಿಲ್ಲವೆಂದು ನನ್ನೊಡನೆ ಒಬ್ಬರು ಹೇಳಿದರು. ಈಗ ಕೋವಿಡ್‌ನ ಕಾಲ ದಾಟಿ ಹೋಯಿತು. ಸಫ್ಫಾಗಿ ನಿಲ್ಲುವಾಗ ಭುಜಕ್ಕೆ ಭುಜ ಸೇರಿಸಿ ನಿಲ್ಲಬೇಕು.

--------------*****--------------

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003) **(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

**ವಸೀಯ್ಯತ್ ಮಾಡಿದವರ ಸತ್ಯವು, ವಸೀಯ್ಯತ್ ಮಾಡುವುದಕ್ಕಿಂತಲು ಹೆಚ್ಚು ಅವಶ್ಯಕವಾಗಿದೆ.**

ಚಂದಾ ಎಷ್ಟು ಕೊಡಲು ಸಾಧ್ಯ. ಅಷ್ಟೇ ಕೊಡಿರಿ. ಆದರೆ ತಮ್ಮ ಆದಾಯ ಕಡಿಮೆ ಬರೆಸುವುದು ಬೇಡ. ನಮ್ಮ ಆದಾಯದನ್ವಯ ನಮಗೆ ಚಂದಾ ಕೊಡಲು ಆಗುವುದಿಲ್ಲ. ನಮಗೆ ನಿಯಮಗಿಂತ ಕಡಿಮೆ (ಕಡಿಮೆ ಶರಹ) ಚಂದಾ ಕೊಡಲು ಅನುಮತಿ ಕೊಡಬೇಕು ಎಂದು ಅನುಮತಿ ಪಡೆಯಲಿ, ನಾನು ಅನುಮತಿ ನೀಡುತ್ತೇನೆ.

ಪ್ರತಿಯೊಬ್ಬರನ್ನು ಸತ್ಯದ ಮೇಲೆ ನಡೆಯುವಂತೆ ಮಾಡಬೇಕು, ಒತ್ತಾಯಪಡಿಸುವುದು ಬೇಡ, ಯಾರು ವಿವಶರಾಗಿದ್ದಾರೆ ಅವರ ವಿವಶವನ್ನು ನಾವು ಮನ್ನಿಸುತ್ತೇವೆ.

ತಾಳ್ಮೆ ಮತ್ತು ಸಹನೆಯ ಕೊರತೆಯಿಂದಾಗಿ ಸಣ್ಣ ವಿಷಯ ದೊಡ್ಡದಾಗುತ್ತದೆ, ಗಂಡಸರು ಸಹ ನಮಗಾಗಿ ಹಾಗೂ ಪ್ರೀತಿಯಿಂದ ವ್ಯವಹರಿಸಬೇಕಾಗಿದೆ, ಸ್ತ್ರೀಯರು ಸಹ ತಾಳ್ಮೆ ವಹಿಸಬೇಕಾಗಿದೆ.

ನಮಾಝ್ ನಿರ್ವಹನೆ ಎಲ್ಲಾ ಮುಸಲ್ಮಾನರ ಮೂಲ ಜವಾಬ್ದಾರಿ ಹಾಗೂ ಕಡ್ಡಾಯ ವಿಷಯವಾಗಿದೆ, ಎಲ್ಲಾ ಕಾರ್ಯಕಾರಿಣಿ ಸಭೆಯ ಸದಸ್ಯರು ಮಾದರಿಯಾಗಿರಬೇಕಾಗಿದೆ.

ಕಾರ್ಯಕಾರಿಣಿ ಸಭೆಯ ಸದಸ್ಯರು ಸಮಯದ ತ್ಯಾಗ ಮತ್ತು ತಖ್ವೆ ಆರಿಝಿಂ ಯ ಪೈಕಿಯು ಆದರ್ಶಪ್ರಾಯ ವಾಗಿರಬೇಕಾಗಿದೆ.

## ಹಝ್ರತ್ ಅಮೀರುಲ್ ಮುಮಿನಿನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರೊಂದಿಗೆ ನೆಷ್ನಲ್ ಆಮಿಲಾ ಅಹ್ಮದಿಯಾ ಜಮಾಅತ್ ಫಿನ್‌ಲ್ಯಾಂಡ್‌ನ ಆನ್‌ಲೈನ್ ಭೇಟಿ ಮತ್ತು ಹುಝೂರ್ ಅನ್ವರ್ ಅವರ ಸ್ವರ್ಣಮಯ ಉಪದೇಶಗಳು ಮತ್ತು ನಿರ್ದೇಶನಗಳು

ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) 7 ನವೆಂಬರ್ 2021 ರಂದು ನೆಷ್ನಲ್ ಅಮೀರ್ ಅಹ್ಮದಿಯಾ ಜಮಾಅತ್ ಫಿನ್‌ಲ್ಯಾಂಡ್ ಜೊತೆ ಆನ್‌ಲೈನ್ ಮೀಟಿಂಗ್ ಮಾಡಿದರು. ಹುಝೂರ್ ಅನ್ವರ್ ಈ ಭೇಟಿಗೋಸ್ಕರ ಇಸ್ಲಾಮಾಬಾದ್ (ಟೆಲ್‌ಫೋರ್ಡ್) ನಲ್ಲಿ ಸ್ಥಾಪನೆಯಾದ MTA ಸ್ಟೋಡಿಯೊಗೆ ಆಗಮಿಸಿದರು. ಅದಾಗ್ಯೂ ಮಜ್ಲಿಸ್ ಆಮಿಲ ಅಹ್ಮದಿಯಾ ಜಮಾಅತ್ ಮುಸ್ಲಿಂ ಅವರು Helsimkin ನಲ್ಲಿರುವ ಮಿಷನ್‌ಹೌಸ್‌ನಲ್ಲಿ ಸಮಾವೇಶಗೊಂಡರು.

ಭೇಟಿಯ ಪ್ರಾರಂಭ ಪವಿತ್ರ ಖುರ್‌ಆನ್‌ನ ಪಠಣದಿಂದಾಯಿತು. ಅದಾದ ನಂತರ ಹುಝೂರೆ ಅನ್ವರ್(ಅತಬಿಅ) ಎಲ್ಲಾ ಉಪಸ್ಥಿತರೊಂದಿಗೆ ಚರ್ಚೆ ನಡೆಸಿದರು ಮತ್ತು ಎಲ್ಲಾ ಉಪಸ್ಥಿತರಿಗೆ ವಿವಿಧ ಕಾರ್ಯಗಳ ಬಗ್ಗೆ ಮಾರ್ಗದರ್ಶನ ನೀಡಿದರು. ಹೀಗೆ ಅವರಿಗೆ ಹುಝೂರರ ನಿರ್ದೇಶನಗಳನ್ನು ಪಡೆಯುವ ಭಾಗ್ಯ ದೊರೆಯಿತು.

ಹುಝೂರೆ ಅನ್ವರ್(ಅತಬಿಅ) ಎಲ್ಲಾ ಕಾರ್ಯಕಾರಿಣಿ ಸಭೆಯ ಸದಸ್ಯರಿಗೆ ನಮಾಝ್ ನಿರ್ವಹಣೆ ಎಲ್ಲಾ ಮುಸಲ್ಮಾನರ ಮೂಲ ಜವಾಬ್ದಾರಿ ಹಾಗೂ ಅವಶ್ಯಕ ವಿಷಯವಾಗಿದೆ ಎಂದು ಗಮನ ಸೆಳೆದರು. ಎಲ್ಲ ಸಭೆಯ ಸದಸ್ಯರು ಈ ಬಗ್ಗೆ ಮಾದರಿಯಾಗಿರಬೇಕಾಗಿದೆ ಎಂದರು. ಹಾಗು ಕಾರ್ಯಕಾರಿಣಿ ಸಭೆಯ ಸದಸ್ಯರು ಸಮಯದ ತ್ಯಾಗ ಮತ್ತು ವಖ್ಫೆ ಆಝಿರಂ ಬಗ್ಗೆ ಎಲ್ಲೆಲ್ಲಿ ಅವರು ಧರ್ಮ ಸೇವೆ ಮಾಡುವರು. ಅಲ್ಲಿ ಅದರ್ಶಪ್ರಾಯವಾಗಿರಬೇಕು ಎಂದರು.

'ಹಣಕಾಸು ಕಾರ್ಯದರ್ಶಿಯವರು ತನ್ನ ಪರಿಚಯ ಮಾಡಿಕೊಟ್ಟರು.

ಹುಝೂರೆ ಅನ್ವರ್(ಅತಬಿಅ) ಹೇಳಿದರು. ಹೌದು. ಮಾಶಾಅಲ್ಲಾಹ್, ಜನರು ತಮ್ಮ ಆದಾಯ ನಮೂನೆ ಅರ್ಜಿ ಸರಿಯಾದ ರೀತಿಯಲ್ಲಿ ತುಂಬುತ್ತಾರೆಯೇ?

(ಸೆಕ್ರೆಟರಿ ಹೇಳಿದರು) ಹುಝೂರ್ ಈ ವಿಷಯದಲ್ಲಿ ಸ್ವಲ್ಪ confusion ಇದೆ. ಕೆಲವು ಜನರು ತಮ್ಮ ಆದಾಯವನ್ನು ಹೆಚ್ಚಿದ್ದರೂ ಕಡಿಮೆ ಬರೆಸುವ ಹಾಗೆ ಅನಿಸುತ್ತದೆ. ಬಜೆಟ್ ಸರಿಯಿರುವುದಿಲ್ಲ ಆ ಕಡೆ ಗಮನ ಸೆಳೆಯಲಾಗುತ್ತದೆ.

ಹುಝೂರೆ ಅನ್ವರ್(ಅತಬಿಅ) ಹೇಳಿದರು. ಅವರಿಗೆ ಹೇಳಬೇಕು. ವಸೀಯ್ಯತ್ ಮಾಡುವುದಾದರೆ ಸತ್ಯ ಹೇಳಿ ಚಂದಾ ಪಾವತಿಸಬೇಕು. ಇಲ್ಲ ಯಾವುದೇ ರೀತಿಯ ವಿವಶತೆ ಇದ್ದರೆ, ಚಂದಾ ಸರಿಯಾಗಿ ನೀಡಲಾಗುತ್ತಿಲ್ಲ ಎಂದಾದರೆ ವಸೀಯ್ಯತ್ ಕೈ ಬಿಡಬಹುದಾಗಿದೆ, ಮತ್ತೆ ಪರಿಸ್ಥಿತಿ ಚೆನ್ನಾಗಿ ಆದರೆ ಮತ್ತೆ ವಸೀಯ್ಯತ್ ಮಾಡಬಹುದು. ವಸೀಯತ್‌ನಲ್ಲಿ ಸತ್ಯ ಹೇಳುವುದು ವಸೀಯ್ಯತ್ ಮಾಡುವುದಕ್ಕಿಂತಲೂ ಹೆಚ್ಚು ಅವಶ್ಯಕವಾಗಿದೆ.

ಅನಂತರ ಹುಝೂರ್(ಅತಬಿಅ) ಚಂದಾ ಆಮ್ ಕೊಡುವುದರ ಬಗ್ಗೆ ಪ್ರಸ್ತಾಪಿಸಿದರು. (ಸೆಕ್ರೆಟರಿ ಹೇಳಿದರು) ಹುಝೂರ್ ಚಂದಾ ಆಮ್ ಕೊಡುವವರಲ್ಲಿ ಕೆಲವು ನ್ಯೂನತೆಗಳಿವೆ. ಅವರಲ್ಲಿ ಹೆಚ್ಚಿನವರು (non earning) ಸಂಪಾದನೆ ಇಲ್ಲದವರು ಇದ್ದಾರೆ. ಅವರ ಆಕ್ಷೇಪವೇನೆಂದರೆ ನಮಗೆ ಸಂಭಾವನೆಯೇ ಬಹಳ ಕಡಿಮೆ ಸಿಗುತ್ತದೆ, ಅದರಿಂದ ಖರ್ಚು ಪೂರ್ತಿಯಾಗುವುದಿಲ್ಲ, ಈ ವಿಷಯದಲ್ಲಿ ಸ್ವಲ್ಪ ಹಿಂಜರಿಕೆ ಇದೆ.

ಹುಝೂರ್(ಅತಬಿಅ) ಹೇಳಿದರು. ಸರಿ, ಅವರಿಗೆ ಹೇಳಿ, ನಿಮಗೆ ಭತ್ಯೆ ಕಡಿಮೆ ಸಿಗುವುದಿದ್ದರೆ, ನಿವು ವಿನಾಯಿತಿ ಪಡೆದುಕೊಳ್ಳಿ. ಚಂದಾ ಎಷ್ಟು ಕೊಡಲು ಸಾಧ್ಯ, ಅಷ್ಟೇ ನೀಡಿದರೆ ಸಾಕು. ಆದರೆ ತಮ್ಮ ಆದಾಯ ಮಾತ್ರ ಕಡಿಮೆ ಬರೆಸಬಾರದು. ನಮಗೆ ಆದಾಯದನ್ವಯ ಚಂದಾ ಕೊಡಲು ಸಾಧ್ಯವಾಗುವುದಿಲ್ಲ. ನಮಗೆ ಕಡಿಮೆ ದರದಲ್ಲಿ ಚಂದಾ ನೀಡಲು ಅನುಮತಿ ನೀಡಬೇಕು. ಅವರು ಅನುಮತಿ ಪಡೆದುಕೊಳ್ಳಲಿ. ನಾನು ಪ್ರತಿಯೊಬ್ಬರಿಗೂ ಅನುಮತಿ ನೀಡುತ್ತೇನೆ.

ಕಾರ್ಯಕಾರಿಣಿ ಸಭೆಯ ಒರ್ವ ಸದಸ್ಯರು ಕೇಳಿದರು. ಹೆಚ್ಚಾಗುತ್ತಿರುವ ದಾಂಪತ್ಯ ಸಮಸ್ಯೆಗಳನ್ನು ಹೇಗೆ ಸುಧಾರಿಸಬೇಕು?

ಹುಝೂರೆ ಅನ್ವರ್(ಅತಬಿಅ) ಹೇಳಿದರು. ನನ್ನದು ಒಂದು ಪುಸ್ತಕವಿದೆ. "ದಾಂಪತ್ಯ ಸಮಸ್ಯೆಗಳು ಮತ್ತು ಅದರ ಪರಿಹಾರ" ಅದನ್ನು ಓದಿ, ಅದರ ಕೆಲ ಭಾಗಗಳನ್ನು ಆಯ್ದು ಮನೆಯಲ್ಲಿ ಕೊಡಿರಿ. ಬೇರೆ ವಿಷಯವೇನೆಂದರೆ ತಾಳ್ಮೆ ಮತ್ತು ಶೌರ್ಯ. ಪುರುಷರಲ್ಲಿ, ಸ್ತ್ರೀಯರಲ್ಲಿ ತಾಳ್ಮೆಯ ಅಭಾವವಿದೆ. ಸಣ್ಣದಾದ ವಿಷಯವನ್ನು ದೊಡ್ಡದಾಗಿ ಮಾಡುತ್ತಾರೆ, ಎಂದರೆ ಪುರುಷರೂ ನಯವಾಗಿ ಮತ್ತು ಪ್ರೀತಿಯಿಂದ ವ್ಯವಹರಿಸಬೇಕಾಗಿದೆ, ಸ್ತ್ರೀಯರೂ ತಾಳ್ಮೆ ವಹಿಸಬೆಕಾಗಿದೆ. ಅದಕ್ಕಾಗಿ ಸಮಯ ಸಮಯಕ್ಕೆ ತರಬೇತಿ ಸೆಕ್ರೆಟರಿಯವರು ನಿಗಾವಹಿಸಬೇಕು. ಇಸ್ಲಾಹೀ ಕಮಿಟಿ ಮತ್ತು ತರಬೇತಿ ಕಮಿಟಿ ಸೇರಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಅದರಿಂದ ಪುರುಷರಿಗೆ ಮತ್ತು ಮಹಿಳೆಯರಿಗೆ ತರಬೇತಿ ಪಡೆಯುವಂತಾಗಬಹುದು. ಪರಿಸ್ಥಿತಿಗಳು ಹದ್ದು ಮೀರಿದಾಗ ಉಮೂರೆ ಆಮದೆಡೆ ಸಮಸ್ಯೆಗಳು ಬರುತ್ತವೆ. ಅದಕ್ಕಿಂತ ಮೊದಲೇ ತರಬೇತಿ ಸೆಕ್ರೆಟರಿ ಸಕ್ರಿಯರಾದರೆ ಸಮಸ್ಯೆಗಳು ತಗ್ಗಬಹುದು ಮತ್ತು ಪರಿಹಾರಗಳು ಒದಗಿಬರಬಹುದು.

ಮಿತ್ರರೊಬ್ಬರು ಹೇಳಿದರು. ಇಲ್ಲಿ ಶಾಲೆಗಳಲ್ಲಿ ಇಸ್ಲಾಮಿ ಶಿಕ್ಷಣ ಬಗ್ಗೆಯೂ ಒಂದು ವಿಷಯ ಭೋಧಿಸಲಾಗುತ್ತದೆ. ಆದರೆ ಸರಕಾರದಿಂದ ಯಾವುದೇ ನಿಗದಿತ ಪಠ್ಯಕ್ರಮವಿಲ್ಲದ ಕಾರಣ ಶಿಕ್ಷಕರು ತಮ್ಮ ಅನಿಸಿಕೆಗಳ ಮೇರೆಗೆ ಇಸ್ಲಾಮಿನ ತಪ್ಪು ವಿಶ್ವಾಸಗಳನ್ನು ಮುಗ್ಧ ಮಕ್ಕಳಿಗೆ ಕಲಿಸುತ್ತಾರೆ. ಉದಾಹರಣೆಗೆ ಪವಿತ್ರ ಖುರ್‌ಆನ್ ತಿದ್ದುಪಡಿಗೆ ಒಳಗಾಗಿದೆ. ಇತ್ಯಾದಿ.

ಹುಝೂರ್ ಅನ್ವರ್(ಅತಬಿಅ) ಹೇಳಿದರು. ಹೌದು, ಇದು ತಪ್ಪಾಗಿದೆ, ನೀವು ಶಿಕ್ಷಣ ಇಲಾಖೆಗೆ ಬರೆದು ತಿಳಿಸಬೇಕು. ನೀವು ತಪ್ಪು ಶಿಕ್ಷಣ ಬೋಧಿಸುತ್ತಿದ್ದೀರಿ. ಇದು ಇಸ್ಲಾಮಿನ ಶಿಕ್ಷಣವಲ್ಲ. ನಿಮ್ಮ ಜಮಾಅತ್ ಅಲ್ಲಿರುವಾಗ ಶಿಕ್ಷಣ ಇಲಾಖೆಯಲ್ಲಿ ನಿಮ್ಮ ಪ್ರಭಾವ ಇರಬೇಕಾಗಿತ್ತು. ನೀವು ಬರೆದು ತಿಳಿಸಬೇಕು. ಪತ್ರಿಕೆಯಲ್ಲೂ ಬರೆಯಬೇಕು, ನೀವು ಬೋಧಿಸುತ್ತಿರುವುದು ತಪ್ಪಾಗಿದೆ, ಇಸ್ಲಾಮಿನ ನಿಜವಾದ ಪರಿಭಾಷೆ ಇದಾಗಿದೆ ಮತ್ತು ಸಾಬೀತುಗೊಂಡಿದೆ. ಪವಿತ್ರ ಖುರ್‌ಆನ್ ಅದಕ್ಕೆ ಪುಷ್ಠಿ ನೀಡುತ್ತದೆ. ಈಗಂತೂ ಬಹಳಷ್ಟು ಜನರ ಸಾಕ್ಷ್ಯವು ಇದೆ. ಬರ್‌ಮಿಂಘಮ್‌ನಲ್ಲಿಯೂ

ಒಂದು exhibition ನಡೆದಿತ್ತು. ಅಲ್ಲಿ ಅವರು ಸಾಬೀತು ಮಾಡಿ ತೋರಿಸಿದ್ದರು. ಹಲವು Article ಬಂದಾಗಿದೆ. ಇತರರ ವಾದಗಳು ಸೇರಿದೆ. ಪವಿತ್ರ ಖುರಆನ್‌ನ ತನ್ನದೇ ಆದ ಒಂದು ವಾದವಿದೆ. ಅದನ್ನು ಪ್ರಚಾರಪಡಿಸಲು ನೀವು ಪ್ರಯತ್ನಿಸಬೇಕಾಗಿದೆ. ಇದು ಮಾಡುವುದಾದರೆ ಯಾವ ಕಾರಣಕ್ಕಾಗಿ? ಈಗ ಜರ್ಮನಿನಲ್ಲಿ ಅವರು ಪ್ರಯತ್ನಪಟ್ಟಿದ್ದಾರೆ, ಅವರು ಹೇಳಿದರು. ಹಾಗಾದರೆ ಶಾಲೆಗಳಲ್ಲಿ ಬೋಧಿಸಲು ನಮಗೆ ಸ್ಲಿಪ್ಸ್ ಮಾಡಬೇಕಾಗಿದೆ. ವಿವಿಧ ಪಂಥದವರು ತಮ್ಮ ತಮ್ಮ ಸ್ಲಿಪ್ಸ್ ಕಳುಹಿಸಿದರು. ಆದರೆ ಅಹ್ಮದಿಯಾ ಜಮಾಅತ್‌ನವರು ಶಾಲೆಗಳಿಗೆ ಇಸ್ಲಾಮಿನ ಮೂಲ ಶಿಕ್ಷಣಾಧಾರಿತ ಸ್ಲಿಪ್ಸ್ ಕಳುಹಿಸಿದ್ದರು. ಅದನ್ನು ಅವರು ಸ್ವೀಕರಿಸಿದ್ದಾರೆ ಮತ್ತು ಅದನ್ನೇ ಬೋಧಿಸಲಾಗುತ್ತದೆ. ನಾನು ಹೇಳಿದ್ದೆ. ಯಾವುದೆ ಬಿನ್ನಾಭಿಪ್ರಾಯ ಬರುವ ವಿಷಯಗಳನ್ನು ತೆಗೆಯಬಾರದು. ನಾವು ಇಸ್ಲಾಮಿನ ಮೂಲ ಶಿಕ್ಷಣ, ಮೂಲ ವಿಶ್ವಾಸಗಳು, ಇಸ್ಲಾಮಿನ ವಿಧಾನಗಳು, ಈಮಾನಿನ ವಿಧಾನಗಳು, ಪವಿತ್ರ ಖುರ್‌ಆನ್, ಹಝ್ರತ್ ಪೈಗಂಬರ್(ಸ) ರ ಸ್ಥಾನಮಾನ ಮತ್ತು ಪ್ರಸಿದ್ಧ ಹದೀಸುಗಳು ಮತ್ತು ನಂಬಲರ್ಹ ಇತಿಹಾಸ ಪ್ರಸ್ತುತಪಡಿಸಬೇಕು. ಅದನ್ನು ಅವರು ಸ್ವೀಕರಿಸಿದರು. ಯಾವುದೇ ಪಂಥದ ಹೇಳಿಕೆ ಇಲ್ಲದ ಕಡೆ, ಎಲ್ಲರಿಗೂ ಮನವರಿಕೆಯಾಗುವಂತಹದ್ದು ಸ್ವೀಕರಿಸಲಾಯಿತು. ಅದೇ ರೀತಿ ನೀವು ಸಹ ಪ್ರಯತ್ನ ಮಾಡಬೇಕು, ಏಕೆ ಹೀಗೆ ಪ್ರಯತ್ನ ಮಾಡುತ್ತಿಲ್ಲ? ಮೊದಲ ಮಾತೇನೆಂದರೆ ಪತ್ರಿಕೆಗಳಲ್ಲಿ ಬರೆಯುತ್ತಿರಬೇಕು, ಮತ್ತೆ ಮತ್ತೆ ಅಹ್ಮದಿಯರ ಕಡೆಯಿಂದ ಬರೆಯುತ್ತಿರಬೇಕು, ನಿಮಗೆ ಬೋಧಿಸಲಾಗುತ್ತಿರುವ ವಿಷಯಗಳು ತಪ್ಪಾಗಿವೆ, ನಾವು ಮುಸಲ್ಮಾನರಾಗಿದ್ದೇವೆ. ಇಸ್ಲಾಮ್ ಏನೆಂಬುದು ನಮಗೆ ಗೊತ್ತು. ನಮಗೆ ಹೇಳದೇ ಕೇಳದೇ ಇದು ಯಾವ ರೀತಿಯ ಇಸ್ಲಾಂ ಬೋಧಿಸುತ್ತಿದ್ದೀರಿ. ಹೀಗೆ ಪ್ರಯತ್ನಪಡಬೇಕು. ಒಂದು ಕಾರ್ಯ ಚಟುವಟಿಕೆ ಹಮ್ಮಿಕೊಳ್ಳಬೇಕು.

(ಆ ಮಿತ್ರರು ಹೇಳಿದರು) ಹೌದು. ಹುಝೂರ್ ಈ ಪೈಕಿ ಶಿಕ್ಷಣ ಇಲಾಖೆಯೊಂದಿಗೆ ಸಂಪರ್ಕ ಮಾಡಿದ್ದೆವು. ಈಗ ಇನ್‌ಶಾಅಲ್ಲಾಹ್ ಪತ್ರಿಕೆಗಳಲ್ಲೂ ಬರೆಯುವೆವು.

ಹುಝೂರೆ ಅನ್ವರ್(ಅತಬಿಅ) ಹೇಳಿದರು. ಹೌದು, ಪತ್ರಿಕೆಗಳಲ್ಲಿ ಬರೆಯಿರಿ, ಮತ್ತೆ ಮತ್ತೆ ಬರೆಯುತ್ತಿರಿ. ಇಲ್ಲಿ ಧ್ವನಿ ಮೊಲಗಿಸುವ, ಪ್ರತಿಭಟಿಸುವ, ಗುಲ್ಲೆಬ್ಬಿಸುವ ಅವರಿಗೆ ಅಭ್ಯಾಸವಿದೆ. ನೀವು ಧ್ವನಿ ಮೊಳಗಿಸತೊಡಗಿದರೆ, ಬರೆಯತೊಡಗಿದರೆ, ಮಕ್ಕಳ ಕಡೆಯಿಂದ, ಹೆತ್ತವರ ಕಡೆಯಿಂದ, ಅಸಂಖ್ಯಾ ಪತ್ರಗಳು ಬಂದರೆ, ಅವರ ಮಾಧ್ಯಮಗಳಲ್ಲಿಯೂ ಬರೆದರೆ ಶಿಕ್ಷಣ ಇಲಾಖೆಯವರು ಎಚ್ಚೆತ್ತುಕೊಳ್ಳುವರು.

ಮಿತ್ರರೊಬ್ಬರು ಹೇಳಿದರು. ಹುಝೂರ್ ತಬ್ಲೀಗ್ ಬಗ್ಗೆ ಒಂದು ಪ್ರಶ್ನೆಯಿತ್ತು. ವಿವಿಧ ಕಾರ್ಯಕ್ರಮಗಳನ್ವಯ ತಬ್ಲೀಗ್ ಕಾರ್ಯಕ್ರಮ ಹಮ್ಮಿಕೊಂಡಾಗ, ಜನರ ಸ್ವಭಾವ ಮಿತಭಾಷೆಯದ್ದಾಗುವಾವ ಸಂಪರ್ಕ ಸಾಧಿಸುವಲ್ಲಿ ಕಠಿಣವಾಗುತ್ತದೆ. ಈ ಪೈಕಿ ಹುಝೂರರ ಮಾರ್ಗದರ್ಶನವೇನು, ಯಾವ ರೀತಿ ಸಂಪರ್ಕ ಸ್ಥಾಪಿಸಬೇಕು.

(ಅಲ್‌ಫಝುಲ್ ಇಂಟರ್‌ನ್ಯಾಷ್ನಲ್, 19–11–2021)

--------------*****--------------

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು. ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್–ಉಲ್–ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಆಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಷೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010) (ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

--------------*****--------------

*(ಪುಟ ಸಂಖ್ಯೆ 01ರ ಉಳಿದ ಭಾಗ)*

ವ್ಯಕ್ತಪಡಿಸಿದ್ದರೆ. ಕೆಲವರು ಇದರ ತಾತ್ಪರ್ಯ ಜಿಬ್ರಾಯಿಲ್ ಎಂದಿದ್ದಾರೆ ಮತ್ತು ಕೆಲವರು ಇದರ ಅರ್ಥ "ಪವಿತ್ರ ಖುರ್‌ಆನ್" ಎನ್ನುತ್ತರೆ. ಏಕೆಂದರೆ ಇದಕ್ಕಿಂತ ಮುಂಚೆ ಮತ್ತು ನಂತರ ಸಹ ಪವಿತ್ರ ಖುರಆನ್‌ನ ವಿವರವಿದೆ. (ಬಹರೆ ಮುಹಿಲ್) ಕೆಲವರು ಇದರ ಅರ್ಥ ದೇವದೂತರು (ಮಲಕ್) ಎನ್ನುತ್ತಾರೆ, ಲೋಕದ ಸೃಷ್ಟಿ ಕಾರ್ಯ ಅವರಿಗೆ ವಹಿಸಲಾಗಿದೆ. ಕೆಲವರು ಎಲ್ಲಾ ದೇವದೂತರಿಗೆ ರೂಹ್ (ಆತ್ಮ) ಎನ್ನುತ್ತಾರೆ, ಕೆಲವರ ದೃಷ್ಟಿಯಲ್ಲಿ ಒಂದು ವಿಶಿಷ್ಠ ದೇವದೂತನಾಗಿದ್ದಾನೆ. ಅವನಿಗೆ ಅಲ್ಲಾಹನು ಕೇವಲ ತನ್ನ ಸ್ತುತಿಗೋಸ್ಕರ ಸೃಷ್ಟಿಸಿದ್ದಾನೆ. ಕೆಲವರು ಈ ವರದಿಯನ್ನು ಸಹಾಬರವರೆಗೆ ತೆಗೆದುಕೊಂಡು ಹೋಗಿದ್ದಾರೆ. ಅಂತೂ ಇದರಲ್ಲಿ ನೂರಾರು ಧ್ವನಿಗಳಿವೆ, ಪ್ರತಿ ಧ್ವನಿಯಲ್ಲಿ ನೂರಾರು ಮುಖಗಳಿವೆ ಮತ್ತು ಪ್ರತಿ ಮುಖದಲ್ಲಿ ನೂರಾರು ಭಾಷೆಗಳಿವೆ ಮತ್ತು ಪ್ರತಿ ಭಾಷೆಯಲ್ಲಿ ನೂರಾರು ರೀತಿಯಲ್ಲಿ ಅಲ್ಲಾಹನನ್ನು

ಸ್ತುತಿಸಲಾಗುತ್ತದೆ. ಬಹುಶ: ಅವರು ಈ ವರದಿ ನೀಡಿ ಇದರಿಂದ ಅಲ್ಲಾಹನ ಸ್ತುತಿಯ ಹಕ್ಕು ಪೂರ್ಣಗೊಂಡಿದೆ ಎಂದು ತಿಳಿದುಕೊಂಡಿದ್ದಾರೆ. ಅದಾಗ್ಯೂ ಈ ಸ್ತುತಿಗಿಂತ ಹೆಚ್ಚಾಗಿ ಹಝ್ರತ್ ಪೈಗಂಬರ್(ಸ) ರವರ ಸಮುದಾಯ ಅಲ್ಲಹನನ್ನು ಸ್ತುತಿಸುತ್ತಿದೆ. ಲೋಕದಾದ್ಯಂತ ಅವರ (ಸ) ಸಮುದಾಯ ಹರಡಿದೆ. ಸಾವಿರಾರು ಭಾಷೆಗಳನ್ನು ಹೊಂದಿದ್ದಾರೆ. ಎಲ್ಲಾ ಭಾಷೆಗಳಲ್ಲೂ ಸ್ತುತಿಸುತ್ತಿದ್ದಾರೆ. ಬಹುಮಾನ್ಯರಾದ ಹಝುರತ್ ಮೌಲ್ವಿ ನೂರುದ್ದೀನ್ ಸಾಹಿಬ್(ರ) ಇಲ್ಲಿ ರೂಹ್(ಆತ್ಮ) ಅರ್ಥ "ದಿವ್ಯವಾಣಿ" ಎನ್ನುತ್ತಾರೆ. ಈ ಅರ್ಥ ಎಲ್ಲಾ ಅರ್ಥಗಳಿಗಿಂತ ಉತ್ತಮವಾಗಿದೆ, ಮತ್ತು ಸರಿಯಾದುದಾಗಿದೆ. ಏಕೆಂದರೆ ಇದಕ್ಕಿಂತ ಮೊದಲು ಮತ್ತು ಈ ವಚನದ ನಂತರವೂ ಪವಿತ್ರ ಖುರ್‌ಆನ್‌ನ ವಿವರವೇ ಇದೆ. ಆದರೆ ಹಝುರತ್ ಮಸೀಹ್ ಮೌಊದ್ (ಅ) ಅತ್ಯಂತ ವಿವರವಾದ ರೀತಿಯಲ್ಲಿ ಈ ವಚನದ ಕುರಿತು ಚರ್ಚಿಸಿದ್ದಾರೆ ಮತ್ತು ಇದರ ಅರ್ಥ ಮನುಷ್ಯನ ಆತ್ಮ ಎಂದೇ ಪರಿಗಣಿಸಿದ್ದರೆ ಮತ್ತು ಹೇಳಿದರು. ಈ ವಚನದಲ್ಲಿ ರೂಹ್ (ಆತ್ಮ) ವಿಷಯದಲ್ಲಿ ತುಂಬಾ ಮಾರ್ಮಿಕ ರೀತಿಯಲ್ಲಿ ವಿವರವಿದೆ.

ಈ ವಚನದಲ್ಲಿ "ಜನರು ಆತ್ಮ ಎಂದರೇನು ಎಂದು ಕೇಳುತ್ತಿದ್ದಾರೆ, ಎಂದು ಹೇಳಲಾಗಿದೆ. ಈ ಕುರಿತು ಹದೀಸುಗಳಲ್ಲಿ ಹಲವು ವರದಿಗಳಿವೆ. ಕೆಲವು ಇಲ್ಲಿ ಬರೆಯಲಾಗಿದೆ. ಈ ಪ್ರಶ್ನೆ ಯಹೂದಿಯರು ಮದೀನದಲ್ಲಿ ಎತ್ತಿದ್ದರು. ಆದರೆ ಅದರ ವಿರುದ್ಧವಾಗಿ ಈ ಅಧ್ಯಾಯ ಮಕ್ಕದಲ್ಲಿ ಅವತರಿಸಿದೆ ಎಂಬ ವಾದ ಮಂಡಿಸಲಾಗುತ್ತದೆ. ಅದರ ಉತ್ತರ ಆ ಜನರು ಹೀಗೆ ನೀಡುತ್ತಾರೆ. ಈ ಅಧ್ಯಾಯದ ಕೆಲವು ಸೂಕ್ತಗಳು ಮದೀನದ್ದಾಗಿವೆ. (ಆದರೆ ನಾನು ಮೇಲೆ ತಿಳಿಸಿದಂತೆ ಇದು ಸರಿಯಾದುದಲ್ಲ)

ಕೆಲವರು ಹೇಳುತ್ತಾರೆ. ಈ ಪ್ರಶ್ನೆ ಮೊದಲು ಮಕ್ಕದಲ್ಲಾಗಿತ್ತು. ಮತ್ತೆ ಇನ್ನೊಮ್ಮೆ ಮದೀನದಲ್ಲಾಗಿದೆ. ಅಬ್ದುಲ್ಲ ಬಿನ್ ಮಸ್‌ಊದ್‌ರ್ ವರದಿ ಇದೆ. ಈ ಪ್ರಶ್ನೆ ಮದೀನದಲ್ಲಾಗಿತ್ತು. ಆಶ್ಚರ್ಯದ ಮಾತೆಂದರೆ ಅವರೇ ಇದರ ವರದಿಗಾರರಾಗಿದ್ದಾರೆ. ಅವರು ಹೇಳುತ್ತಾರೆ. ಈ ಅಧ್ಯಾಯ ಮಕ್ಕದ್ದಾಗಿದೆ. ಅದರ ಉತ್ತರ ಕೆಲ ಪಂಡಿತರು ಹೀಗೆ ನುಡಿದರು. ಅದೇ ಪ್ರಶ್ನೆ ಮತ್ತೊಮ್ಮೆ ಮದೀನದಲ್ಲಾಗಿರಬಹುದು. ಯಾರೂ ಈ ವರದಿ ಮಕ್ಕದ್ದೆನ್ನುತ್ತಾರೆ. ಅವರು ಹೇಳುತ್ತಾರೆ. ಮಕ್ಕದ ಕೆಲವರು ಮದೀನಕ್ಕೆ ಹೋಗಿದ್ದರು. ಅಲ್ಲಿ ಹೋಗಿ ಅವರು ಯಹೂದಿಯರಲ್ಲಿ ಹಝ್ರತ್ ಪೈಗಂಬರ್(ಸ) ರ ಬಗ್ಗೆ ವಿವರ ನೀಡಿದರು ಮತ್ತು ಹೇಳಿದರು. ಒಬ್ಬ ಪ್ರವಾದಿಯೆಂದು ವಾದ ಮಾಡುವವನು ನಮ್ಮಲ್ಲಿ ಬಂದಿರುತ್ತಾರೆ. ನಾವು ಅವರೊಂದಿಗೆ ಯಾವ ಪ್ರಶ್ನೆ ಮಾಡಬೇಕು, ಅದರಿಂದ ಅವರ ಸುಳ್ಳು ಬಯಲಿಗೆ ಬರುವಂತಾಗಬೇಕು. ಅವರು ಹೇಳಿದರು. ರೂಹ್ (ಆತ್ಮ) ಮತ್ತು ಅಸ್‌ಹಾಬೆ ಕಹಫ್ ಮತ್ತು ದುಲ್ ಖರನೈನ್ ಬಗ್ಗೆ ಪ್ರಶ್ನೆ ಕೇಳಿರಿ. ಆಗ ಆ ಜನರು ಮಕ್ಕಕ್ಕೆ ಮರಳಿ ಹಝುರತ್ ಪೈಗಂಬರ್(ಸ) ರೊಡನೆ ಈ ಪ್ರಶ್ನೆ ಕೇಳಿದರು ಆಗ ಈ ವಚನ ಅವತರಿಸಿತು.

ನನ್ನ ದೃಷ್ಟಿಯಲ್ಲಿ ಮೊದಲ ಸಲ ಈ ಪ್ರಶ್ನೆ ಮಕ್ಕದಲ್ಲೇ ಆಗಿತ್ತು ಮತ್ತು ಅಲ್ಲೇ ಅವರಿಗೆ ಉತ್ತರ ಸಿಕ್ಕಿದೆ. ಮದೀನದಲ್ಲೂ ಯಹೂದಿಯರು ಈ ಪ್ರಶ್ನೆ ಕೇಳಿದ ಸಾಧ್ಯತೆಯೂ ಇಲ್ಲದ್ದಿಲ್ಲ. ಏಕೆಂದರೆ ಯಹೂದ್ಯರ ಉತ್ಸಾಹ ಮೇರೆಗೆಯೇ ಈ ಪ್ರಶ್ನೆ ಬಂದಿತ್ತು. ಅದಕ್ಕೆ ಅವರೇ ಈ ಪ್ರಶ್ನೆ ಕೇಳಿರಬಹುದು. ಆದರೆ ಮತ್ತೊಮ್ಮೆ ಈ ವಚನ ಅವತರಿಸಿತು ಎಂಬ ವಾದ ಸರಿಯಲ್ಲ. ಮದೀನದಲ್ಲಿ ಈ ಪ್ರಶ್ನೆ ಬಂದಾಗ ರಸೂಲುಲ್ಲಾಹ್ (ಸ) ಈ ವಚನವನ್ನು ಅದರ ಉತ್ತರವಾಗಿ ಪಠಿಸಿರಬಹುದು. ಈ ಘಟನೆಯಿಂದ ವರದಿಗಾರರೊಬ್ಬರು ಹೇಳಿರಬಹುದು ಮತ್ತು ನಂತರ ವರದಿಗಾರರೊಬ್ಬರು ತಿಳಿದುಕೊಂಡಿರಬಹುದು. ಬಹುಶ: ಈ ಪ್ರಶ್ನೆಯ ಉತ್ತರಕ್ಕಾಗಿ ಈ ವಚನ ಮದೀನದಲ್ಲಿ ಅವತರಿಸಿದೆ. **(ತಫ್ಸೀರ್ ಕಬೀರ್ ಸಂಪುಟ 4, ಪುಟ 380, ಮುದ್ರಣ 2010 ಖಾದಿಯಾನ್)**

-------------*****-------------

## <u>ದಿವ್ಯದೂತರು (ಮಲಾಯಿಕ)</u>

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

**MUSLIM TELEVISION AHMADIYYA INTERNATIONAL**
**www.mta.tv**

## <u>ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ</u>

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ. **(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

## <u>ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.</u>

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗ್ರತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ." **(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

ಪುರುಷನು ಮೈತುಂಬ ಬಟ್ಟೆ ಧರಿಸುವವನಾದರೆ well dressed ಅಂದುಕೊಳ್ಳುತ್ತಾನೆ. ಅಂದರೆ ಕೋಟ್ ಧರಿಸಿರಬೇಕು. ಟೈ ಹಾಕಿರಬೇಕು. ಆದರೆ ಹೆಣ್ಣು well dressed ಅಂದುಕೊಳ್ಳಬೇಕಾದರೆ ಅವಳು ಮಿನಿಸ್ಕರ್ಟ್ ಹಾಕಿರಬೇಕು. ಈ ತತ್ವ ನನಗೆ ಅರ್ಥವಾಗಲಿಲ್ಲ.

ಸ್ತ್ರೀಯರು ತನ್ನನ್ನು ಬೆತ್ತಲೆ ಮಾಡಿಕೊಳ್ಳುತ್ತಿದ್ದಾರೆ. ತನ್ನನ್ನು ಅಪಮಾನಿಸಿಕೊಳ್ಳುತ್ತಿದ್ದಾರೆ. ಅಹ್ಮದಿ ಹುಡುಗಿಯರು, ಸ್ತ್ರೀಯರು ತಮ್ಮ ಗೌರವ ಘನತೆ ತನ್ನ ಲಜ್ಜೆಯನ್ನು ಕಾಪಾಡಿಕೊಳ್ಳುವುದಲ್ಲಿಯೇ ಇದೆ ಎಂದು ಭಾವಿಸಬೇಕು. ಏಕೆಂದರೆ ಲಜ್ಜೆಯೇ ಕವಚರಕ್ಷೆಯಾಗಿದೆ. ಅದುವೇ ನಮ್ಮನ್ನು ಇತರರ ದೃಷ್ಟಿಯಿಂದ ರಕ್ಷಿಸುತ್ತದೆ.

## ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರೊಡನೆ ಕೇಳಲಾದ ಪ್ರಶ್ನೆಗಳಿಗೆ ವಿವೇಕಯುತ ಉತ್ತರಗಳು.

**ಸೂಚನೆ:** ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿಭಿನ್ನ ಸದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ಕಾರ್ಯಕ್ರಮಗಳಲ್ಲಿ ಮುಖ್ಯ ಸಮಸ್ಯೆಗಳ ಕುರಿತು ನೀಡಿದ ಅಧ್ಯಾಪನೆಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್-ಫಝ್ಲ್ International ನ ಕೃಪೆಯಿಂದ ಮುದ್ರಿಸಲಾಗುತ್ತದೆ. (ಸಂಪಾದಕರು)

### ಭಾಗ-1

**ಪ್ರಶ್ನೆ:** ಮಹಿಳೆಯರು ಮುಟ್ಟಿನ ಅವಧಿಯಲ್ಲಿ ಪವಿತ್ರ ಖುರ್‌ಆನ್‌ನ್ನು ತೆಗೆದುಕೊಳ್ಳಲು ಮತ್ತು ಪಠಿಸಲು ಅಂತೆಯೇ ಕಂಪ್ಯೂಟರ್ ಅಥವಾ I-pad ಇತ್ಯಾದಿ ಮೂಲಕ ಖುರ್‌ಆನ್ ಪಠಿಸುವ ಕುರಿತು ವ್ಯಕ್ತಿಯೊಬ್ಬನು ವಿವಿಧ ಉಲಮಾ, ತತ್ವಜ್ಞಾನಿಗಳ ಪುರಾವೆಗಳನ್ನು ಆಧರಿಸಿ ಒಂದು ಸಂಶೋಧನೆ ಹುಝೂರರ ಸಮ್ಮುಖದಲ್ಲಿ ಪ್ರಸ್ತುತಪಡಿಸಿ ಆ ಸಮಸ್ಯೆಗಳ ಕುರಿತು ಹುಝೂರರಿಂದ ಮಾರ್ಗದರ್ಶನ ಬಯಸಿದರು.

ಹುಝೂರ್ ಅನ್ವರ್(ಅಬಿಅ) ತನ್ನ ಪತ್ರದಲ್ಲಿ ದಿನಾಂಕ: 5 ಅಕ್ಟೋಬರ್ 2018 ರಲ್ಲಿ ಈ ಕೆಳಗಿನ ಉತ್ತರ ನೀಡಿದರು.

**ಉತ್ತರ:** ಈ ಸಮಸ್ಯೆ ಕುರಿತು ಉಲಮಾಅ ಮತ್ತು ಧಾರ್ಮಿಕ ತತ್ವಜ್ಞಾನಿಗಳ ಮಧ್ಯೆ ಭಿನ್ನತೆ ಕಂಡುಬರುತ್ತಿವೆ. ವಿಭಿನ್ನ ಉಲಮಾಅಗಳು ಸಹ ತನ್ನ ಖುರ್‌ಆನ್‌ನ ಜ್ಞಾನ ಅನುಸಾರವಾಗಿ ಈ ಕುರಿತು ವಿಭಿನ್ನ ಸಲಹೆಗಳನ್ನು ನೀಡಿರುತ್ತಾರೆ.

ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ಪ್ರಕಾಶದಲ್ಲಿ ಈ ಕುರಿತು ನನ್ನ ಅಭಿಪ್ರಾಯವೆಂದರೆ, ಮುಟ್ಟಿನ ಅವಧಿಯಲ್ಲಿ ಸ್ತ್ರೀಯರು ತಮಗೆ ಪವಿತ್ರ ಖುರ್‌ಆನ್‌ನ ಎಷ್ಟು ಭಾಗ ಕಂಠಸ್ತವಾಗಿರುತ್ತದೆ. ಅದನ್ನು ಸ್ಮರಣೆ ರೂಪದಲ್ಲಿ ಉಚ್ಚರಿಸಿಕೊಳ್ಳಬಹುದು. ಅಲ್ಲದೇ ಅಗತ್ಯ ಬಿದ್ಧಾಗ ಯಾವುದೇ ಸ್ವಚ್ಛ ಬಟ್ಟೆಯಿಂದ ಪವಿತ್ರ ಖುರ್‌ಆನ್‌ನ್ನು ಹಿಡಿಯಬಹುದು. ಯಾರಿಗಾದರೂ ಪುರಾವೆಗಳು ಒದಗಿಸಬೇಕಾದರೆ ಅಥವಾ ಮಕ್ಕಳಿಗೆ ಪವಿತ್ರ ಖುರ್‌ಆನ್ ಬೋಧಿಸಲು ಪವಿತ್ರ ಖುರ್‌ಆನ್‌ನ ಯಾವುದಾದರೂ ಭಾಗ ಪಠಿಸಲೂಬಹುದು. ಆದರೆ ವಿಧಿಬದ್ಧವಾಗಿ ಪಠಿಸಬಾರದು. ಅದೇ ರೀತಿ ಈ ಅವಧಿಯಲ್ಲಿ ಮಹಿಳೆಗೆ ಕಂಪ್ಯೂಟರ್ ಇತ್ಯಾದಿಯ ಮೇಲೆ ಪವಿತ್ರ ಖುರ್‌ಆನ್‌ನ್ನು ಭೌತಿಕವಾಗಿ ಹಿಡಿಯಲಾಗುವುದಿಲ್ಲ. ಆದರೂ ಕ್ರಮಬದ್ಧ ರೀತಿಯಲ್ಲಿ ಪಾರಾಯಣಕ್ಕೆ ಅನುಮತಿ ಇಲ್ಲ. ಆದರೆ ಯಾವುದೇ ಕಾರಣಕ್ಕೆ, ಉದಾಹರಣೆಗೆ ಪುರಾವೆ ಹುಡುಕಬೇಕಾದರೆ ಅಥವಾ ಯಾರಿಗಾದರೂ ಸಾಕ್ಷ್ಯ ಒದಗಿಸಬೇಕಾದಲ್ಲಿ ಕಂಪ್ಯೂಟರ್ ಇತ್ಯಾದಿಯ ಮೂಲಕ ಪವಿತ್ರ ಖುರ್‌ಆನ್‌ನಿಂದ ಪ್ರಯೋಜನ ಪಡೆಯಬಹುದಾಗಿದೆ. ಅದಕ್ಕೇನೂ ಅಡ್ಡಿಯಿಲ್ಲ.

**ಪ್ರಶ್ನೆ:** ಮಹಿಳೆಯೋರ್ವಳು ಮುಟ್ಟಿನ ಅವಸ್ಥೆಯಲ್ಲಿ ಮಸೀದಿಗೆ ಬರುವ ವಿಷಯವಾಗಿ ವಿವಿಧ {ದೀಸುಗಳು ಹಾಗೂ ಪ್ರಸಕ್ತ ಕಾಲದಲ್ಲಿ ಮಹಿಳೆಯರ ಆ ದಿನಗಳ ಸ್ವಚ್ಛತೆಗೆ ಆಧುನಿಕ ರೀತಿಯ ಸಾಮಗ್ರಿಗಳು ಲಭ್ಯವಿದೆ. ಅದನ್ನು ಹುಝೂರರ ಮುಂದೆ ಪ್ರಸ್ತಾಪಿಸುತ್ತಾ ಮಸೀದಿಯಲ್ಲಿ ನಡೆಯುವ ಜಮಾಅತಿನ ಸಭೆ, ಸಮಾರಂಭ ಮುಂತಾದ ಕಾರ್ಯಕ್ರಮದಲ್ಲಿ ಸ್ತ್ರೀಯರ ಭಾಗವಹಿಸುವಿಕೆಯ ಬಗ್ಗೆ ಮತ್ತು ಅಂತಹ ಅಮುಸ್ಲಿಮ್ ಸ್ತ್ರೀಯರು ಮಸೀದಿಗೆ ಭೇಟಿ ನೀಡುವ ಕುರಿತು ಹುಝೂರ್ ಅನ್ವರ್ ಅವರಿಂದ ಮಾರ್ಗದರ್ಶನ ಪಡೆಯಬಯಸಿದರು. ಆಗ ಹುಝೂರ್ ಅನ್ವರ್ ತನ್ನ ಪತ್ರ ದಿನಾಂಕ: 14 ಮೇ 2020 ರಲ್ಲಿ ನಮೂದಿಸಿದಂತೆ ಈ ಕೆಳಗಿನಂತೆ ಉತ್ತರ ನೀಡಿದರು.

**ಉತ್ತರ:** ಮುಟ್ಟಿನ ಅವಸ್ಥೆಯಲ್ಲಿ ಸ್ತ್ರೀಯರು ಮಸೀದಿಯಿಂದ ಯಾವುದೇ ವಸ್ತು ತರಲು ಅಥವಾ ಮಸೀದಿಗೆ ಯಾರನ್ನಾದರು ಬಿಟ್ಟು ಬರಲು ಅಥವಾ ಮಸೀದಿಗೆ ಹೋಗಿ ಕುಳಿತುಕೊಳ್ಳುವ ವಿಷಯವಾಗಿ ಬೇರೆ ಬೇರೆ ಆಜ್ಞೆಗಳು ನಮಗೆ ಹುಝೂರ್(ಸ) ಸ್ಪಷ್ಟ ರೂಪದಲ್ಲಿ ತಿಳಿಸಿರುತ್ತಾರೆ. ಅಂದ ಹಾಗೆ ನೀವು ನಿಮ್ಮ ಪತ್ರದಲ್ಲೂ ಅದನ್ನು ಪ್ರಸ್ತಾಪಿಸಿದ್ದೀರಿ. ಹುಝೂರ್ (ಸ) ತನ್ನ ಪತ್ನಿಯರಿಗೆ ಈ ಅವಸ್ಥೆಯಲ್ಲಿ ಚಾಪೆ ಇತ್ಯಾದಿ ಮಸೀದಿಗೆ ಹೋಗಿ ಹಾಸಿ ಬರಲು ಅನುಮತಿ ನೀಡುತ್ತಿದ್ದರು. ಆದರೆ ಮಸೀದಿಗೆ ಹೋಗಿ ಕುಳಿತುಕೊಳ್ಳಲು ಹುಝೂರ್ (ಸ) ನಿಷೇಧಿಸಿದರು. ಆ ಬಗ್ಗೆ ಹದೀಸುಗಳಲ್ಲಿ ಉಲ್ಲೇಖಗಳಿವೆ. ಅಂದ ಹಾಗೆ ಅವರು ಹಬ್ಬಗಳ ಸಂದರ್ಭದಲ್ಲಿ ಯಾವ ಹುಡುಗಿಯರಿಗೆ, ಪರದೆ ಕಡ್ಡಾಯ ಮತ್ತು ಮುಟ್ಟಿನ ಅವಸ್ಥೆಯ ಸ್ತ್ರೀಯರನ್ನು ಹೀಗೆ ಎಲ್ಲರನ್ನು ಹಬ್ಬಕ್ಕಾಗಿ (ಈದ್) ಹೋಗಲು ಆಗ್ರಹಪೂರ್ವಕ ನಿರ್ದೇಶನ ನೀಡಿದರು. ತಲೆಯ ಮೇಲೆ ವಸ್ತ್ರವಿಲ್ಲದವರನ್ನೂ ಸಹ ತನ್ನ ಯಾವುದೇ ಸಹೋದರಿಯಿಂದ ವಸ್ತ್ರವನ್ನು ಪಡೆದುಕೊಂಡಾದರೂ ಹೋಗಲು ಆಗ್ರಹಿಸಿದರು. ಆದರೆ ಅದರ ಜೊತೆಯಲ್ಲಿಯೇ ಮುಟ್ಟಿನ ಅವಸ್ಥೆಯ ಸ್ತ್ರೀಯರಿಗೆ ನಮಾಝಿನ ಸ್ಥಳದಿಂದ ಪ್ರತ್ಯೇಕವಾಗಿದ್ದು ದುಆದಲ್ಲಿ ಪಾಲ್ಗೊಳ್ಳಲು ನಿರ್ದೇಶಿಸಿದರು.

ಅದೇ ರೀತಿ ಹಜ್ಜತುಲ್ ವಿದಾ (ಅಂತಿಮ ಹಜ್ಜ್) ಸಂದರ್ಭದಲ್ಲಿ ಹೆಚ್ಚಿನ ಮುಸ್ಲಿಮರು ಉಮ್ರಾಹ್ ಮಾಡುತ್ತಿದ್ದರು. ಹಝ್ರತ್ ಆಯಿಶಾ(ರ) ಮುಟ್ಟಿನ ಅವಸ್ಥೆಯಲ್ಲಿದ್ದರು. ಆದ್ದರಿಂದ ಹುಝೂರ್(ಸ) ಅವರಿಗೆ ಉಮ್ರಾಹ್ ಮಾಡಲು ಅನುಮತಿ ನೀಡಲಿಲ್ಲ. ಏಕೆಂದರೆ ತವಾಫ್ (ಪ್ರದೀಕ್ಷಣೆ) ಮಾಡಲು ಮಸೀದಿಯಲ್ಲಿ ಹೆಚ್ಚಿನ ಸಮಯ ಕಳೆಯಬೇಕಾಗುತ್ತದೆ. ಮತ್ತೆ ಈ ಅವಸ್ಥೆಯಿಂದ ಪಾರಾದಾಗ ಹಜ್ಜ್ ಆದ ನಂತರ ಅವರಿಗೆ ಪ್ರತ್ಯೇಕವಾಗಿ ಉಮ್ರಾಹ್ ಮಾಡಲು ಕಳುಹಿಸಿದರು.

ಆದುದರಿಂದ ಹದೀಸುಗಳಲ್ಲಿ ಇಷ್ಟೆಲ್ಲಾ ಸ್ಪಷ್ಟತೆಯಿರುವಾಗ ನಮ್ಮ ಇಚ್ಛಾನುಸಾರ ನಡೆಯಲು ಯಾವ ಕಾರಣವು ಇಲ್ಲ. ಹೊಸ ಹೊಸ ಮಾರ್ಗಗಳು ಹುಡುಕಬೇಕಾಗಿಲ್ಲ.

ಮೊದಲಿನ ಕಾಲದಲ್ಲಿ ಸ್ತ್ರೀಯರಿಗೆ ಈಗಿರುವಂತೆ ಸ್ವಚ್ಛತೆಯ ಸಾಮಗ್ರಿಗಳು ಇರಲಿಲ್ಲ ಎಂಬ ಪ್ರಶ್ನೆ ಇದೆ. ಸರಿ ಎಂದಾದರೂ ಈ ರೀತಿ ಆಧುನಿಕ ಸಾಮಗ್ರಿಗಳು ಇರಲಿಲ್ಲ ಎಂದ ಮಾತ್ರಕ್ಕೆ ಅವರು ತಮ್ಮ ಸ್ವಚ್ಛತೆ ಕಾಪಾಡುತ್ತಿರಲಿಲ್ಲ ಎಂದಾಗುವುದಿಲ್ಲ. ಆ ದಿನಗಳಲ್ಲಿ ಅವರ ರಕ್ತ ಅಲ್ಲಲ್ಲಿ ಚೆಲ್ಲುತ್ತಿರುತ್ತದೆ ಎಂದೇನಿಲ್ಲ. ಮನುಷ್ಯನು ಎಲ್ಲಾ ಕಾಲದಲ್ಲೂ ತನ್ನ ಅಗತ್ಯಕ್ಕನುಸಾರವಾಗಿ ಒಳ್ಳೆಯ ವ್ಯವಸ್ಥೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಾನೆ. ಹಾಗೆಯೇ ಮೊದಲಿನ ಕಾಲದಲ್ಲೂ ಸ್ತ್ರೀಯರು ತಮ್ಮ ಸ್ವಚ್ಛತೆಗಾಗಿ ಉತ್ತಮ ಏರ್ಪಾಡು ಮಾಡಿಕೊಳ್ಳುತ್ತಿದ್ದರು.

ಈ ಆಧುನಿಕ ಯುಗದ ಸ್ವಚ್ಛತಾ ಸಾಮಾಗ್ರಿಗಳಲ್ಲೂ ನ್ಯೂನತೆಗಳಿವೆ. ಹೆಚ್ಚಿನ ಪ್ರಮಾಣದಲ್ಲಿ ರಕ್ತಸುರಿಯುವ ಮಹಿಳೆಯರ Pad Leak ಆಗುವ ಕಾರಣ ಕೆಲವೊಮ್ಮೆ ಬಟ್ಟೆಗಳು ಹಾಳಾಗುತ್ತವೆ.

ಆದುದರಿಂದ ಇಸ್ಲಾಂ ಧರ್ಮ ನೀಡಿರುವ ಶಿಕ್ಷಣಗಳು ಸರ್ವಕಾಲಿಕವು ಮತ್ತು ಸರ್ವರಿಗೆ ಒಂದೇ ರೀತಿಯಾಗಿವೆ. ಅದರ ಮೇಲೆ ಎಲ್ಲಾ ಕಾಲಕ್ಕೂ ಅದೇ ರೀತಿಯ ನಡತೆಯಿರುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಕಾಲದಲ್ಲೂ ಅದೇ ರೀತಿಯಿತ್ತು.

ಯಾವುದೇ ಸ್ಥಳದಲ್ಲಿ ಏನಾದರೂ ವಿವಶತೆಯಿದ್ದರೆ, ನಮಾಝಿನ ಕೋಣೆ ಹೊರತು ಬೇರೆ ಸ್ಥಳವಿಲ್ಲ. ಆ ಸಂದರ್ಭದಲ್ಲಿ ಅದೇ ಕೋಣೆಯ ಬಾಗಿಲ ಸಮೀಪ ವಿಶೇಷ ರೀತಿಯಲ್ಲಿ ನಮಾಝ್ ನಿರ್ವಹಿಸದ ಸ್ಥಳದಲ್ಲಿ ಅಂತಹ ಸ್ತ್ರೀಯರು ಕುಳಿತುಕೊಳ್ಳಬಹುದಾಗಿದೆ. ಅಥವಾ ಮಸೀದಿಯ ಕೊನೆಯ ಭಾಗದಲ್ಲಿ ಅಂತಹ ಸ್ತ್ರೀಯರನ್ನು ಕುರ್ಚಿಗಳು ಹಾಯಿಸಿ ಅವರಿಗೆ ಕುಳಿತುಕೊಳ್ಳುವ ವ್ಯವಸ್ಥೆ ಮಾಡಬಹುದಾಗಿದೆ. ಏಕೆಂದರೆ ನಮಾಝ್ ನಿರ್ವಹಿಸುವ ಜಾಗವು ಹೊಲಸಾಗುವಂತಹ ಪ್ರಸಂಗ ಬರಬಾರದು.

ಅಮುಸ್ಲಿಮರು ಮಸೀದಿಗೆ ಭೇಟಿ ನೀಡುವ ವಿಷಯದಲ್ಲಿ. ಮೊದಲಂತೂ ಭೇಟಿಯ ನಡುವೆ ಅವರಿಗೆ ಮಸೀದಿಯಲ್ಲಿ ಕುಳಿತುಕೊಳ್ಳಲಾಗುವುದಿಲ್ಲ, ಬದಲು ಕೇವಲ ಮಸೀದಿಯನ್ನು ತೋರಿಸಲಾಗುತ್ತದೆ. ಅದರ ಒಟ್ಟು ಸಮಯ ಮಸೀದಿಗೆ ಹೋಗಿ ಚಾಪೆ ತರುವ ಅಥವಾ ಹಾಸಿ ಬರುವವಷ್ಟೇ ಇರುತ್ತದೆ. ಆದರೆ ಅವರಿಗೆ ಮಸೀದಿಯಲ್ಲಿ ಕುಳಿತುಕೊಳ್ಳುವ ಅವಶ್ಯಕತೆ ಬಿದ್ದರೆ ನಮಾಝ್ ನಿರ್ವಹಿಸುವ ಜಾಗ ಬಿಟ್ಟು ಮಸೀದಿಯ ಕೊನೆಯ ಭಾಗದಲ್ಲಿ ಕುರ್ಚಿಗಳಲ್ಲಿ ಕುಳ್ಳಿರಿಸಬಹುದು.

(ಮುಂದುವರಿಯುವುದು)

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಉದ್ಘಾಟನೆಯಿಂದಾಗಿ ಅಹ್ಮದಿಯಾ ಮುಸ್ಲಿಂ ಸದಸ್ಯರು ಶಾಂತರೀತಿಯಲ್ಲಿ ತಮ್ಮ ಚಟುವಟಿಕೆಗಳನ್ನು ನಡೆಸಬಹುದಾಗಿದೆ ಮತ್ತು ಅದರಲ್ಲಿ ತಾವುಗಳು ಒಟ್ಟುಗೂಡಿ ಆರಾಧನೆ ಮಾಡಬಹುದಾಗಿದೆ.

ಆನಂತರ ಅವರು ಹೇಳಿದರು. ಧಾರ್ಮಿಕ ಸ್ವಾತಂತ್ರ್ಯವು ಜರ್ಮನಿ ಸಂವಿಧಾನದ ಒಂದು ಮೂಲಭಾಗವಾಗಿದೆ. ಆದರೆ ನಾವು ವಿವಿಧ ದೇಶಗಳ ಮೇಲೆ ದೃಷ್ಟಿ ಹಾಯಿಸಿದರೆ ತಿಳಿದುಬರುತ್ತದೆ. ಈ ರೀತಿಯ ಹಕ್ಕುಗಳು ಪ್ರತಿಯೊಬ್ಬರಿಗೂ ದೊರೆಯುವುದಿಲ್ಲ. ಜನರಿಗೆ ಅವರ ಧರ್ಮ ನಂಬಿಕೆ ಸಲುವಾಗಿ ದೌರ್ಜನ್ಯಗಳಿಗೆ ತುತ್ತಾಗಬೇಕಾಗುತ್ತದೆ. ವಿಷಾದಪೂರ್ವಕ ಹೇಳಬೇಕಾಗುತ್ತದೆ. ಅಹ್ಮದಿ ಮುಸಲ್ಮಾನರ ಮೇಲೂ ಈ ರೀತಿಯ ಅತ್ಯಾಚಾರಗಳು ಮಾಡುತ್ತಾರೆ. ಹಲವು ದೇಶಗಳಲ್ಲಿ ಉದಾಹರಣೆಗೆ ಪಾಕಿಸ್ತಾನ ಅಥವಾ ಬರ್‌ಕೀನಫಾಸುವಿನಲ್ಲಿ ನಿಮ್ಮ ಜನರ ಮೇಲೆ ಅತ್ಯಾಚಾರ ಮಾಡಲಾಗುತ್ತದೆ. ಧಾರ್ಮಿಕ ನಂಬಿಕೆಯ ಮೇಎಗೆ ಸೆರೆ ಹಿಡಿಯಲಾಗುತ್ತದೆ. ನಿಮ್ಮ ಮಸೀದಿಗಳನ್ನು ಸ್ಮಶಾನಗಳನ್ನು ಕೆಡವಿ ಹಾಕುತ್ತಾರೆ. ನಿಮಗೆ ಶಾಂತಿಯಿಂದರಲು ಸಾಧ್ಯವಿಲ್ಲ. ನಿಮ್ಮ ಜೀವಗಳಿಗೆ ಅಪಾಯವಿದೆ. ನಾನು ಹೇಳಬಯುಸುವೇನೆಂದರೆ ಇಂತಹ ಘಟನೆಗಳ ಪ್ರಚಾರವಾಗಬೇಕು. ಅದರಿಂದ ಲೋಕವು ತಿಳಿಯುವಂತಾಗುತ್ತದೆ. ಆಗ ಎಲ್ಲಾ ಪ್ರಜಾಸತ್ತಾತ್ಮಕ ದೇಶಗಳ ಕರ್ತವ್ಯವಾಗುತ್ತದೆ. ನಿಮಗೆ ಸಹಕರಿಸಬೇಕು. ನಿಜವಾಗಿ ಹೇಳಬೇಕಾದರೆ ಅಲ್ಪಸಂಖ್ಯಾತರ ರಕ್ಷಣೆಯಿಂದಲೇ ಶಾಂತಿ ಸ್ಥಾಪನೆ ಸಾಧ್ಯ. ಪ್ರತಿಯೊಬ್ಬರಿಂದಾಗಿ ಇಂತಹ ಶಾಂತಿಯುತ ವಾತಾವರಣ ನಿರ್ಮಿಸಿದಾಗ ಮಾತ್ರ ಶಾಂತಿ ಸ್ಥಾಪನೆ ಸಾಧ್ಯವಾಗುತ್ತದೆ.

ಮತ್ತು ಅವರು ಹೇಳಿದರು. ಧರ್ಮ ಕಾರಣಕ್ಕಾಗಿ ನಮ್ಮಲ್ಲಿ ಭೇಧ ಉಂಟಾಗಬಾರದು. ಈ ಕ್ಷೇತ್ರದಲ್ಲಿ ಪರಸ್ಪರ ಒಟ್ಟುಗೂಡಿ ಐಕ್ಯತೆಯಿಂದಿರುವ ಬಗ್ಗೆ ಹೇಳುವುದು ನಾನು ಅನಿವಾರ್ಯ ಎಂದು ಭಾವಿಸುತ್ತೇನೆ. ಈ ಕಾರ್ಯದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಒಂದು ಬಹು ದೊಡ್ಡ ಪಾತ್ರ ವಹಿಸಬಹುದಾಗಿದೆ.

ಅನಂತರ ಅವರು ಹೇಳಿದರು. ಕೆಲವು ತಿಂಗಳ ಹಿಂದೆ ನನಗೆ Nidda ನಗರದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಜೊತೆ ಶತಮಾನೋತ್ಸವ ಆಚರಿಸುವ ಸಂದರ್ಭ ಒದಗಿ ಬಂದಿತ್ತು. ಆದರೆ ನಮ್ಮ ಬಹಳಷ್ಟು ನಾಗರಿಕರಿಗೆ ಗೊತ್ತೇ ಇಲ್ಲ. ನೀವು ಇಷ್ಟೊಂದು ದೀರ್ಘ ಅತಿಥಿಯಿಂದ ನಮ್ಮ ನಡುವೆ ಇರುವಿರಿ ಎಂದು. ಆ ಸಮದರ್ಭದಲ್ಲಿ ನನಗೆ ಅವಕಾಶ ಲಭಿಸಿತ್ತು. ಸ್ವಯಂ ನಾನು ನಿಮ್ಮ ಧ್ಯೇಯವಾಕ್ಯವಾದ "Love for All Hatred for None" ಗೆ ಸಾಕ್ಷಿಯಾಗಿದೆ. ಇದು ಕೇವಲ ಪದಗಳಲ್ಲ. ಬದಲು ನೀವು ಹಾಗೆಯೇ ನಡೆದುಕೊಳ್ಳುವವರಾಗಿದ್ದೀರಿ ಎಂದು. ನೀವು ಯಾವುದಕ್ಕೂ ಬಚ್ಚಿಡುವುದಿಲ್ಲ, ಜರ್ಮನಿಯಲ್ಲಿ ನೀವು ಸಕ್ರಿಯರಾಗಿದ್ದೀರಿ, ಎಲ್ಲರೊಡನೆಯೂ ಸಂಬಂಧವಿರಿಸಿಕೊಳ್ಳುತ್ತೀರಿ. ನನ್ನ ಬಯಕೆ ಏನೆಂದರೆ ನೀವು ಮಸ್ಜಿದ್ ಸಾದಿಖ್‌ನಲ್ಲಿ ಹರ್ಷಿತರಾಗಿರಿ ಮತ್ತು ಶಾಂತಿ ಕಾಪಾಡುತ್ತೀರಿ. ಧನ್ಯವಾದಗಳು.

ಅನಂತರ ರಾಜ್ಯ ಸಂಸತ್ ಸದಸ್ಯರು Tobias utter ನಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರು ಮೊಟ್ಟ ಮೊದಲಾಗಿ ಹುಝೂರಾರ ಸೇವೆಯಲ್ಲಿ ಸಲಾಂ ಹೇಳಿದರು. ಮತ್ತು ಸ್ವಾಗತ ಕೋರಿದರು. ಅನಂತರ ಎಲ್ಲಾ ಉಪಸ್ಥಿತರಿಗೆ ಸ್ವಾಗತ ಕೋರಿದರು.

ಅನಂತರ ಅವರು ಹೇಳಿದರು. ನನಗೆ ಎರಡನೆಯ ಸಲ ಈ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಸದಸ್ಯರೊಂದಿಗೆ ಸಂಬೋಧಿಸುವ ಅವಕಾಶ ದೊರೆಯುತ್ತದೆ. ರಾಜ್ಯ ಸಂಸತ್ ಸದಸ್ಯ ನೆಲೆಯಲ್ಲಿ ನಿಮಗೆಲ್ಲರಿಗೂ ಶುಭವನ್ನು ಕೋರುತ್ತೇನೆ.

ಮತ್ತು ಅವರು ಹೇಳಿದರು. ಅಹ್ಮದಿಯಾ ಮುಸ್ಲಿಂ ಜಮಾಅತ್ Karben ಅನ್ನು ಇಂದು ಮಸೀದಿಯ ಉದ್ಘಾಟನೆಯ ಅವಕಾಶ ದೊರೆಯುತ್ತಿದೆ. ಇದು ಜರ್ಮನಿಯಲ್ಲಿ ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯ ಇದೇ ಎಂಬುದಕ್ಕೆ ಸಾಕ್ಷಿಯಾಗಿದೆ. ಈ ಅವಕಾಶ ಎಲ್ಲಾ ಕಡೆ ಎಲ್ಲರಿಗೂ ಲಭ್ಯವಿಲ್ಲ. ನಿಶ್ಚಿತವಾಗಿಯೂ ನಿಮಗೆ ಅನುಭವವಾಗಿರಬೇಕು. ಜರ್ಮನಿಯಲ್ಲಿ ನಿರ್ಮಾಣ ಕಾರ್ಯಗಳ ಕಾನೂನುಗಳು ಎಷ್ಟು ಕಠಿಣಕರವಾಗಿದೆ ಎಂದು. ಆದರೂ ನೀವು ಮಸೀದಿಯುನ್ನು ಕಟ್ಟಿಕೊಂಡಿದ್ದೀರಿ. ಮಸೀದಿಯ ಒಂದು ಆರಾಧನಾ ಸ್ಥಳವಾಗಿದೆ. ಇಲ್ಲಿ ಜನರು ಪರಸ್ಪರ ಭೇಟಿಯಾಗುತ್ತಾರೆ ಮತ್ತು ಶಾಂತಿ ನೆಲೆಸುತ್ತಾರೆ. ನನಗೆ ಯಾವಾಗಲೂ ತುಂಬಾ ಸಂತೋಷವಾಗುತ್ತದೆ. ಅಹ್ಮದಿಯಾ ಜಮಾಅತ್ ಕೇವಲ ತಮ್ಮ ಬಗ್ಗೆ ಚಿಂತಿಸುವುದಿಲ್ಲ. ಬದಲು ಅಹ್ಮದಿಯಾ ಮುಸ್ಲಿಂ ಜಮಾಅತ್ ಮಾನವಿಯತೆಯ ಸೇವೆಯೂ ಸಹ ಒಂದು ಧಾರ್ಮಿಕ ಅಂಗ ಎಂದು ಪರಿಗಿಸುತ್ತದೆ. His Holiness ಅವರು ಸೋಮವಾರದಂದು ಅದನ್ನು ಸ್ಪಷ್ಟಪಸಿಸಿದರು. ನೆರೆಹೊರೆಯವರ ಸೇವೆ ಧಾರ್ಮಿಕ ಕರ್ತವ್ಯವಾಗಿದೆ ಎಂದು. ನನಗೆ ಎಲ್ಲಾ ಕಡೆ ಅಹ್ಮದಿ ಸಮಾಜದ ಜನರು ಸಕ್ರಿಯವಾಗಿ ಕಂಡುಬರುತ್ತಾರೆ.

ಮತ್ತು ಅವರು ಪಾಕಿಸ್ತಾನದಲ್ಲಿ ಅಹ್ಮದಿಯರ ಮತ್ತು ಕ್ರಿಸ್ತರ ವಿರೋಧ ಮತ್ತು ಅವರ ಮೇಲೆ ನಡೆಯುವ ಅತ್ಯಾಚಾರಗಳ ಬಗ್ಗೆ ವಿವರಿಸುತ್ತಾ ಹೇಳಿದರು. ಇಂತಹ ಜನರು ಧರ್ಮದ ಹೆಸರನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ಏಕೆಂದರೆ ಆ ಮೂಲಕ ಎಲ್ಲ ಅಧರ್ಮ ಚಟುವಟಿಕೆಗಳು ನಡೆಸಬಹುದು ಎಂದು ನಿಜವಾಗಿ ಹೇಳಬೇಕಾದರೆ ಅವರಿಗೆ ಧರ್ಮದ ನಿಮಿತ್ತ ಯಾವ ಸಂಬಂಧವು ಇರುವುದಿಲ್ಲ. ಆದರೆ ಇಂತಹ ಘೋರ ಅಂಧಕಾರದ ಸಮಯದಲ್ಲಿ ಅಲ್ಲಹನ (ದೇವನ) ಪ್ರಕಾಶದ ಅವಶ್ಯಕತೆ ಇರುತ್ತದೆ. ಪ್ರೀತಿ ಮತ್ತು ಶಾಂತಿಯ ಅವಶ್ಯಕತೆಯಿರುತ್ತದೆ. ಜನರ ವಿರೋಧಾತ್ಮಕ ಘೋಷಣೆಗಳಿಂದ ಹೆದರಬಾರದು, ಇಂತಹ ಜನರ ಇಂದು ಅಗತ್ಯವಿದೆ. ಖಲಿಫತುಲ್ ಮಸೀಹ್ ತಮ್ಮ ವಿವಿಧ ಭೇಟಿ ಕಾರ್ಯಕ್ರಮಗಳಲ್ಲಿ ಮತ್ತು ವಿವಿಧ ಸ್ಥಳಗಳ ಸಂಬೋಧನೆಗಳಲ್ಲಿ ಶಾಂತಿಯತ್ತ ಗಮನ ಸೆಳೆದಿದ್ದಾರೆ. ಅವರ ಗ್ರಂಥ Die weltkmiese und ten weg zum Frieden ಯಿಂದ ಸ್ಪಷ್ಟವಾಗುತ್ತದೆ.

**(ಮುಂದುವರಿಯುವುದು)**

---

**ಪ್ರಮುಖ ಸೂಚನೆ** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**MUSLIM TELEVISION AHMADIYYA INTERNATIONAL**

**www.mta.tv**

---

### ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

---

### *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

---

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**

**M.B. Nasir Ahmed & Family, Bengaluru, Karnataka**

**"ಯಾರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸುವುದಿಲ್ಲ."**

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**

**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 25 July 2024, Issue No. 30

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)


# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-29ರ ಉಳಿದ ಭಾಗ ಮುಂದುವರಿಸಲಾಗಿದೆ)*

**30 ಆಗಸ್ಟ್ 2023 ಬುಧವಾರ**

ಹುಝೂರೆ ಅನ್ವರ್(ಅಬಿಅ) ಮುಂಜಾನೆ 5.40 ಕ್ಕೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಹುಝೂರೆ ಅನ್ವರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು. ಮುಂಜಾನೆ ಹುಝೂರೆ ಅನ್ವರ್(ಅಬಿಅ) ಕಚೇರಿ ಅಂಚೆಗಳನ್ನು, ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ಹುಝೂರ್ ಅನ್ವರ್ ಕಚೇರಿಯ ನಾನಾ ಕಾರ್ಯಗಳಲ್ಲಿ ತೊಡಗಿದ್ದರು.

**ಮಸ್ಜಿದ್ ಸಾದಿಖ್‌ನ ಉದ್ಘಾಟನಾ ಸಮಾರಂಭ**

ಇಂದು Karben ನಗರದಲ್ಲಿ "ಮಸ್ಜಿದ್ ಸಾದಿಖ್" ನ ಉದ್ಘಾಟನಾ ಸಮಾರಂಭದ ಕಾರ್ಯಕ್ರಮವಿತ್ತು. ಹುಝೂರೆ ಅನ್ವರ್(ಅಬಿಅ) 4 ಗಂಟೆ 50 ನಿಮಿಷಕ್ಕೆ ತಮ್ಮ ವಸತಿಯಿಂದ ಹೊರಗೆ ಆಗಮಿಸಿದರು ಮತ್ತು ಫ್ರೆಂಕ್‌ಫರ್ಟ್‌ನಿಂದ Karbeen ಗೆ ಪ್ರಯಾಣ ಬೆಳೆಸಿದರು. ಇಲ್ಲಿಂದ Karben ನಗರಕ್ಕಿರುವ ದೂರ 19 ಕಿ.ಮೀ ಆಗಿದೆ. 17 ನಿಮಿಷದ ಪ್ರಯಾಣದ ನಂತರ 5 ಗಂಟೆ 7 ನಿಮಿಷಕ್ಕೆ ಹುಝೂರೆ ಅನ್ವರ್(ಅಬಿಅ) "ಮಸ್ಜಿದ್ ಸಾದಿಖ್" ತಲುಪಿದರು. ಅವರಿಗಾಗಿ ಈ ದಿನ ಅತ್ಯಂತ ಹರ್ಷದಾಯಕ ಹಾಗೂ ಅನುಗ್ರಹಪೂರ್ಣ ದಿನವಾಗಿತ್ತು. ಹುಝೂರೆ ಅನ್ವರ್(ಅಬಿಅ)ರ ಪವಿತ್ರ ಪಾದಗಳು ಈ ಭೂಮಿಯ ಮೇಲೆ ಎರಡನೆಯ ಸಲ ಬಿದ್ದಿದ್ದವು. ಇದಕ್ಕಿಂತ ಮೊದಲು 17 ಜೂನ್ 2014 ರಂದು ಹುಝೂರೆ ಅನ್ವರ್(ಅಬಿಅ) ಇಲ್ಲಿ ಬಂದು ಮಸ್ಜಿದ್ ಸಾದಿಖ್‌ನ ಅಡಿಗಲ್ಲು ಹಾಕಿದ್ದರು.

ಇಂದು ಪ್ರತಿಯೊಬ್ಬರು ಅತ್ಯಂತ ಸಂತೋಷದಲ್ಲಿದ್ದರು. ಹುಝೂರೆ ಅನ್ವರ್(ಅಬಿಅ) ವಾಹನದಿಂದ ಹೊರಗೆ ಬರುತ್ತಲೇ ಜಮಾಅತ್‌ನ ಬಾಂಧವರು ಹರ್ಷಿತರಾಗಿ ಹುಝೂರೆ ಅನ್ವರ್(ಅಬಿಅ) ಘೋಷಣೆಗಳನ್ನು ಕೂಗಿದರು. ಬಲಕ ಬಲಕಿಯರು ಗುಂಪುಗಟ್ಟಿ ಸ್ವಾಗತ ಗೀತೆಗಳನ್ನು ಹಾಡಿದರು. ಈ ಸಂದರ್ಭದಲ್ಲಿ Karben ನಗರದ ಅಧ್ಯಕ್ಷರಾದ ಸನ್ಮಾನ್ಯ ಆತಿಫ್ ಶೆಹಝಾರ್ ವರ್ಕ್ ಸಾಹಿಬ್, ರೀಜ್ನಲ್ ಅಮೀರ್ ಮುಝಫ್ಫರ್ ಅಹ್ಮದ್ ಭಟ್ಟಿ ಸಾಹಿಬ್ ಮತ್ತು ಇಲ್ಲಿಯ ಮುರಬ್ಬಿಯರಾದ ತಹಸೀನ್ ರಶೀದ್ ಸಾಹಿಬ್ ಹುಝೂರೆ ಅನ್ವರ್(ಅಬಿಅ) ಅವರಿಗೆ ಸುಸ್ವಾಗತ ಕೋರಿದರು.

ಅನಂತರ ಹುಝೂರೆ ಅನ್ವರ್(ಅಬಿಅ) ಮಸೀದಿಯ ಸಭಾಂಗಣಕ್ಕೆ ಆಗಮಿಸಿದರು ಮತ್ತು ಝುಹರ್ ಮತ್ತು ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅದಾದ ತಕ್ಷಣ ಮಸೀದಿಯ ಉದ್ಘಾಟನೆ ನೆರವೇರಿತು. ಹುಝೂರೆ ಅನ್ವರ್(ಅಬಿಅ) ಆಗಮನಕ್ಕಿಂತ ಮುಂಚೆ ಸಮಾರಂಭದಲ್ಲಿ ಸೇರಿದ ಅತಿಥಿಗಳೆಲ್ಲ ತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದರು. ಇಂದಿನ ಈ ಸಮಾರಂಭದಲ್ಲಿ 91 ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ವಿವಿಧ ರಾಜಕೀಯ ಪಕ್ಷಗಳು FDP ಮತ್ತು Die Grunen, SPD, DU Catholic, ರಾಜ್ಯದ ರಾಜಕಾರಿಣಿಗಳು ಮತ್ತು Protestant ನ ಸ್ಥಳೀಯರು morman culture ನ ಪ್ರತಿನಿಧಿಗಳು, ಪೋಲೀಸ್ ಅಗ್ನಿಶಾಮಕದಳ, ವಕೀಲರು, ವಿವಿಧ ಸಾಮಾಜಿಕ ಸೇವೆ ಸಲ್ಲಿಸುವ ಸಂಸ್ಥೆಗಳ ಪ್ರತಿನಿಧಿಗಳು, Sports club ಮತ್ತು ಜೀವನಕ್ಕೆ ಸಂಬಂಧಿಸಿದ ವಿವಿಧ ಭಾಗಗಳ ಅತಿಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾರಂಭವು ಪವಿತ್ರ ಖುರ್‌ಆನ್‌ನ ಪಠಣದಿಮದಾಯಿತು. ಅದನ್ನು ಹಾಫಿಝ್ ಬದರ್ ಯಾಸಿರ್ ಅಶ್ರಫ್ ಸಾಹಿಬ್ ನೇರವೇರಿಸಿಕೊಟ್ಟರು. ಸನ್ಮಾನ್ಯ ಯಾಸಿರ್ ಅಹ್ಮದ್ ಸಾಹಿಬ್ ಅವರ ಜರ್ಮನ್ ಭಾಷಾಂತರ ಪ್ರಸ್ತುತಪಡಿಸಿದರು.

ಅದಾದ ನಂತರ ಸನ್ಮಾನ್ಯ ಅಮೀರ್ ಸಾಹಿಬ್ ಜರ್ಮನಿ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು.

ಅಮೀರ್ ಸಹಿಬ್ ಈ ನಗರದ ಪರಿಚ ನೀಡುತ್ತಾ ಹೇಳಿದರು. 1970 ರಲ್ಲಿ Karben ನಗರ ಉದಯವಾಯಿತು. ಆದರೆ ಈ ನಗರದ ಬೇರುಗಳು ಅದಕ್ಕಿಂತ ಪುರಾತನವಾಗಿದೆ. 1827 ರಲ್ಲಿ ಮೊದಲ ಬಾರಿಗೆ ಈ ನಗರದ ಹೆಸರು ಕಾರ್‌ಬನ್ ಎಂದು ಕೇಳಿಬಂತು.

ಈ ನಗರದಲ್ಲಿ 1987 ರಿಂದ ಅಹ್ಮದಿ ಬಂದು ಸೇರಲಿಕ್ಕೆ ಪ್ರಾರಂಭಿಸಿದರು. ಆದರೆ ಕ್ರಮಬದ್ಧ ರೀತಿಯಲ್ಲಿ ಜಮಾಅತ್ 1998 ರಂದು ಸ್ಥಾಪಿತವಾಯಿತು. ಪ್ರಾರಂಭದಲ್ಲಿ 6 ಕುಟುಂಬಗಳ 25 ಜನರಿಂದ ಜಮಾಅತ್ ಸ್ಥಾಪಿತಗೊಂಡಿತು. ಈಗ ಅದರ ಸಂಖ್ಯೆ 276 ಕ್ಕೆ ತಲುಪಿದೆ.

ಪ್ರಾರಂಭದಲ್ಲಿ ಕೇಂದ್ರಗಳನ್ನಾಗಿ ಮಾಡಿ ಮನೆಗಳಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಅನಂತರ ನಮಾಝ್ ಮತ್ತು ಇನ್ನಿತರ ಸಭೆಗಳಿಗಾಗಿ ಒಂದು ಸಣ್ಣದಾದ ಮನೆ ಬಾಡಿಗೆಗೆ ಪಡೆದುಕೊಂಡರು. ಅದು 2013 ರಿಂದ ಬಳಕೆಯಲ್ಲಿದೆ. ಅನಂತರ ನಗರದ townhall ನ ಕೆಳಗಡೆ ಒಂದು ಜಾಗ ಪಡೆದುಕೊಂಡರು. ಅಲ್ಲಿ ಜಮಾಅತ್ ತಮ್ಮ ಕಾರ್ಯಕ್ರಮಗಳನ್ನು ಆಯೋಜಿಸತೊಡಗಿತು.

2023 ರಲ್ಲಿ ಮಸೀದಿಗಾಗಿ Plot ಪಡೆಯುವ ವಿಷಯವಾಗಿ ಮಾತುಕತೆಯಾಯಿತು ಮತ್ತು ಕಟ್ಟಡ ನಿರ್ಮಾಣಕ್ಕಾಗಿ ಪ್ರಾಥಮಿಕ ಅರ್ಜಿಗೆ ಮಂಜೂರಿ ದೊರೆಯಿತು. 2014 ರಲ್ಲಿ 834 ಚ. ಮೀನ ಒಂದು ಭೂಭಾಗ ಪಡೆದುಕೊಳ್ಳುವ ಭಾಗ್ಯ ದೊರೆಕಿತು.

Karben ನಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಹಲವು ಸಾಮಾಜಿಕ ಹಿತಕ್ಕಾಗಿ ಮಾಡುವ ಕಾರ್ಯಗಳಿಂದಾಗಿ ಹೆಸರು ಪಡೆದಿದೆ. 2013 ರಲ್ಲಿ ನಮ್ಮ ಯುವಕರ ಉಪಸಂಘಟನೆ ಕಾರ್‌ಬನ್ ನಗರದ ಕಸ ಮತ್ತು ಕೊಳೆ ತೆಗೆಯುವ ಕಾರ್ಯದಲ್ಲಿ ತೊಡಗಿತ್ತು. ಹೀಗೆ ಪ್ರತಿ ಹೊಸ ವರ್ಷ ದಿನದಂದು ಈ ಕಾರ್ಯ ಪ್ರಾಮಾಣಿಕವಾಗಿ ಮಾಡಿಕೊಂಡು ಬಂದಿದ್ದಾರೆ.

ಹುಝೂರೆ ಅನ್ವರ್(ಅಬಿಅ) 7 ಜೂನ್ 2014 ರಂದು ಇಲ್ಲಿ ಆಗಮಿಸಿ ಮಸ್ಜಿದ್ ಸಾದಿಖ್‌ಗೆ ಅಡಿಗಲ್ಲು ಹಾಕಿದರು. ನಮಾಝ್ ಸಭಾಂಗಣ ಜೊತೆಯಲ್ಲಿ ಒಂದು ವಿವಿಧೋದ್ದೇಶಿತ ಕೋಣೆ ನಿರ್ಮಾಣ ಮಾಡಲಾಯಿತು. ಈ ಎರಡರ ನಿರ್ಮಾಣ ವಿಸ್ತೀರ್ಣ 126 ಚ.ಮೀ ಆಗಿದೆ. ಇದಲ್ಲದೆ ಒಂದು ಕಚೇರಿ (Office) ಸಹ ಇದೆ. ಇನ್ನು ಕೆಲವು ಸಣ್ಣ ಕೋಣೆಗಳಿವೆ. ಅದು ಕಚೇರಿ ಕೆಲಸಗಳ ನಿಮಿತ್ತ ಬಳಸಲಾಗುತ್ತದೆ. ಮಸೀದಿಗೆ ಲಗತ್ತಿಸಿ ಒಂದು ಅಡುಗೆ ಕೋಣೆ ಮತ್ತು ಅತಿಥಿಗೃಹವಿದೆ. ಗುಂಬಜನ ವಿಸ್ತೀರ್ಣ 6 ಮೀಟರ್ ಇದೆ. ಎರಡು ಗೋಪುರಗಳನ್ನು ನಿರ್ಮಿಸಲಾಗಿದೆ. ಪ್ರತಿಯೊಂದರ ಎತ್ತರ 7 ಮೀಟರ್ ಇದೆ. ಈ ಮಸೀದಿಯ ನಿರ್ಮಾಣ ವೆಚ 7 ಲಕ್ಷ 50 ಸಾವಿರ ಯುರೋ ಒಳಗೂಡಿ ಪರಿಪೂರ್ಣವಾಯಿತು.

ಅಮೀರ್ ಸಾಹಿಬರ ಪರಿಚಯ ಭಾಷಣದ ನಂತರ Natalie pawlik ಸಾಹಿಬ ಅವರ ಜರ್ಮನ್ ಸಂಸದ್ ಸದಸ್ಯರಾಗಿರುವವರು ತಮ್ಮ ಪರಿಚಯ ಭಾಷಣ ಮಾಡುತ್ತಾ ಹೇಳಿದರು. His Holiness ಅವರ ಜೊತೆಯಲ್ಲಿ ಸಲಾಂ ಅರ್ಪಿಸುತ್ತೇನೆ. ಅದೇ ರೀತಿಯಲ್ಲಿ ನೆಫ್ನಲ್ ಅಮೀರ್ Abdulah wagishausar ಸಾಹಿಬ್ ಮತ್ತು ಮೇಯರ್ ಸಾಹಿಬ್ ಮತ್ತು ಎಲ್ಲಾ ಆದರಣೀಯ ಅತಿಥಿಗಳಿಗೂ ಸಲಾಂ ಅರ್ಪಿಸುತ್ತೇನೆ.

ನಂತರ ಅವರು ಹೇಳಿದರು. ಮೊಟ್ಟ ಮೊದಲಿಗೆ ತಮ್ಮ ಆಮಂತ್ರಣಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ತಾವು ಈ ಶುಭ ಸಂದರ್ಭದಲ್ಲಿ ನನಗೆ ಸಂಬೋಧಿಸಲು ಅವಕಾಶವನ್ನು ನೀಡಿದ್ದೀರಿ. ಈ ಮಸೀದಿ

*(ಪುಟ-11ರಲ್ಲಿ ಮುಂದುವರಿಸಲಾಗಿದೆ)*


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**


Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.